# ಬೃಹಚ್ಚರಣ

ಸಂಘದ ತ್ರೈಮಾಸಿಕ ವಾರ್ತಾ ಪತ್ರಿಕೆ



**ಅರ್ಪಣೆ**

ಈ ಸಂಚಿಕೆಯನ್ನು ನಮ್ಮ ಸಮುದಾಯದ ಹಿರಿಯ ಸದಸ್ಯ, ಸಂಘದ ಹಿತೈಷಿಗಳಾಗಿದ್ದ ಎಸ್. ಶಿವರಾಂರವರಿಗೆ ಶ್ರದ್ಧೆ-ಗೌರವಗಳಿಂದ ಅರ್ಪಿಸಲಾಗಿದೆ.

ಸಂಪುಟ : 12 ಸಂಚಿಕೆ : 2 ಖಾಸಗಿ ಪ್ರಸಾರಕ್ಕಾಗಿ ಸೆಪ್ಟೆಂಬರ್ 2021–ಡಿಸೆಂಬರ್ 2021

Email : mmdbsangha@gmail.com; mmdbs.mag@gmail.com Web : www.mmdbs.in

## ಸರ್ವಸದಸ್ಯರ ಸಭೆಯ ವಿಶೇಷ ಸಂಚಿಕೆ



## ಅಧ್ಯಕ್ಷರ ನುಡಿ

ಬಂಧುಮಿತ್ರರಿಗೆ ನಮಸ್ಕಾರಗಳು.

ನೀವು ಮತ್ತು ಪರಿವಾರವರ್ಗದವರು ಕ್ಷೇಮವೆಂದು ನಂಬುತ್ತೇನೆ.

"ಬೃಹಚ್ಚರಣ"ದ 2022ನೆ ವರ್ಷದ ಮೊದಲ ಸಂಚಿಕೆಯು ನಿಮ್ಮ ಕೈಸೇರಿದೆ. ನೂತನ ಸಂಪಾದಕರಾಗಿ ಶ್ರೀ ಆರ್. ರಮೇಶ್ ಅವರಿಂದ, ನಿಕಟಪೂರ್ವ ಸಂಪಾದಕರೂ, ಹಿರಿಯ ಸದಸ್ಯರೂ ಆಗಿರುವ ಶ್ರೀ ಕೆ.ಸಿ. ನಟರಾಜ್ ಅವರ ಮಾರ್ಗದರ್ಶನದಲ್ಲಿ ಪ್ರಕಟವಾಗಿರುವ ಈ ಸಂಚಿಕೆಯು ನಿಮ್ಮೆಲ್ಲರಿಗೆ ಮೆಚ್ಚುಗೆಯಾಗಲಿದೆಯೆಂದು ಆಶಿಸುತ್ತೇನೆ.

ಸಂಚಿಕೆಯ ಗುಣಮಟ್ಟವನ್ನು ಉತ್ತಮ ಪಡಿಸುವ ದೃಷ್ಟಿಯಿಂದ, ಕಲೆ, ಸಂಸ್ಕೃತಿ, ಆಧ್ಯಾತ್ಮ, ಆಚಾರ ವಿಚಾರಗಳು ಇವುಗಳಲ್ಲದೇ, ವಿಜ್ಞಾನ, ತಂತ್ರಜ್ಞಾನ, ಕ್ರೀಡೆ, ಪರಿಸರ ಸಂರಕ್ಷಣೆ ಮುಂತಾದ ವಿಷಯಗಳ ಬಗ್ಗೆ ಸದಸ್ಯರಿಂದ ಲೇಖನಗಳನ್ನು ಆಹ್ವಾನಿಸುತ್ತೇವೆ. ಲೇಖನಗಳು ಸ್ವಂತ ರಚಿತವಾಗಿದ್ದು, ಉತ್ತಮ ಶೈಲಿ ಮತ್ತು ಮಾಹಿತಿಯಿಂದಿರಲಿ. ಲೇಖನಗಳ ಪ್ರಕಟಣೆಯ ವಿಷಯದಲ್ಲಿ ಸಂಪಾದಕ ಮಂಡಳಿಯ ತೀರ್ಮಾನವೇ ಅಂತಿಮ.

ಸಂಘದ ಸರ್ವಸದಸ್ಯರ ಸಭೆಯು ಯಶಸ್ವಿಯಾಗಿ ನಡೆಯಲು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸೇವೆ ಸಲ್ಲಿಸಿದವರಿಗೆಲ್ಲಾ ಧನ್ಯವಾದಗಳು.

ಬೃಹಚ್ಚರಣ ಸಂಘವು 2022ರ ನೂತನ ವರ್ಷ ಕ್ಯಾಲೆಂಡರ್ ಬಿಡುಗಡೆ ಮಾಡಲಿದ್ದು, ಜಾಹಿರಾತು ನೀಡಿರುವ ಪ್ರಾಯೋಜಕರಿಗೆ ಸಂಘ ಶುಭ ಹಾರೈಸುತ್ತದೆ.

ಈಚೆಗೆ ಪ್ರಕಟವಾದ **"ಸದಸ್ಯರ ಕೈಪಿಡಿ"** (Members Directory) ಸದಸ್ಯರಿಗೆ ವಿತರಿಸಲ್ಪಡುತ್ತಿದೆ. ವಿಳಾಸ, ಮತ್ತಿತರ ವಿವರಗಳಲ್ಲಿ ತಿದ್ದುಪಡಿಯ ಅವಶ್ಯಕತೆಯಿದ್ದರೆ, ದಯವಿಟ್ಟು ಅಧ್ಯಕ್ಷರಿಗೆ / ಕಾರ್ಯದರ್ಶಿಗಳಿಗೆ ತಿಳಿಸಬೇಕು. ಅಥವಾ mmdbsangha@gmail.com ಗೆ ಇ-ಮೇಲ್ ಮೂಲಕ ವಿವರಗಳನ್ನು ಕಳಿಸಬೇಕು.



ಕಾರ್ಯಕಾರಿ ಸಮಿತಿಯು ಇಷ್ಟರಲ್ಲಿಯೇ ಒಂದು ದಿನದ ಪ್ರವಾಸವನ್ನು ಆಯೋಜಿಸುವ ಬಗ್ಗೆ ಯೋಚಿಸುತ್ತಿದೆ. ಇದು ಸಾಧ್ಯವಾಗುವುದೆಂದು ಆಶಿಸುತ್ತೇನೆ.

ಎಲ್ಲರಿಗೂ ಒಳ್ಳೆಯದಾಗಲಿ.

**ಬಿ. ಸುಬ್ರಹ್ಮಣ್ಯಂ**
ಅಧ್ಯಕ್ಷರು

## ಕಾರ್ಯದರ್ಶಿ ನುಡಿ

ಬೃಹಚ್ಚರಣ ಸಂಘದ ಸದಸ್ಯರಿಗೆ ನಮಸ್ಕಾರ.

ಸಂಘದ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು 2021ರ ಅಕ್ಟೋಬರ್ ಮೂರರಂದು ಬಸವನಗುಡಿಯ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದ ಶ್ರೀ ಭ್ರಮರಾಂಬಿಕ ಸದನದಲ್ಲಿ ಯಶಸ್ವಿಯಾಗಿ ಜರುಗಿತು. ನೂರಾರು ಸದಸ್ಯರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ಆಡಳಿತವರ್ಗವು ನಮ್ಮ ಸಂಘಕ್ಕೆ ಮಾಡಿಕೊಂಡಿದ್ದ ಮನವಿಗೆ ಸ್ಪಂದಿಸಿ ಅಲ್ಲೇ ನಿರ್ಮಾಣವಾಗಿರುವ ನೂತನ ಸಭಾಭವನದಲ್ಲಿ ಉಪಯೋಗಕ್ಕೆಂದು 100 ಕುರ್ಚಿಗಳನ್ನು ದೇಣಿಗೆ ನೀಡಿರುತ್ತದೆ. ಇದಕ್ಕಾಗಿ ಧನಸಹಾಯ ನೀಡಿದ ಎಲ್ಲ ಸದಸ್ಯರಿಗೂ ಕಾರ್ಯಕಾರಿ ಸಮಿತಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ದಿನಾಂಕ **7-3-2022ರಂದು ಕಿತ್ತಿಗಾನಹಳ್ಳಿಯಲ್ಲಿ ನಾಗಾರಾಧನೆ** ಹಾಗೂ **8-3-2022ರಂದು ಶ್ರೀ ಶ್ರೀನಿವಾಸ ದೇವರ ರಥೋತ್ಸವದಲ್ಲಿ** ಸಂಘದ ಸದಸ್ಯರು ಮತ್ತು ಕುಟುಂಬದವರು ಭಾಗವಹಿಸಬೇಕೆಂದು ಕೋರಿಕೆ. **2022** ವರ್ಷವು ಎಲ್ಲರಿಗೂ ಶುಭತರಲೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.



ವಂದನೆಗಳು.

**ಎಸ್.ಸಿ. ಶ್ರೀನಿವಾಸ**
ಕಾರ್ಯದರ್ಶಿ

## ಅಭಿನಂದನೆಗಳು



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ 2022-24ನೇ ಸಾಲಿಗೆ ಅಧ್ಯಕ್ಷರಾಗಿ ಶ್ರೀ ಅಶೋಕ್ ಹಾರನಹಳ್ಳಿಯವರು ಚುನಾಯಿತರಾಗಿರುವುದಕ್ಕೆ ಬೃಹಚ್ಚರಣ ಬ್ರಾಹ್ಮಣ ಸಂಘವು ಅಭಿನಂದಿಸುತ್ತದೆ. ನೂತನ ಅಧ್ಯಕ್ಷರಾಗಿ ತಾವು ಹಮ್ಮಿಕೊಳ್ಳಲಾಗುವ ಎಲ್ಲ ಕಾರ್ಯಕ್ರಮಗಳೂ ಯಶಸ್ವಿಯಾಗಲೆಂದು ಹಾರೈಸುತ್ತಾ ಶುಭಾಶಯಗಳನ್ನು ಕೋರುತ್ತದೆ.

**ಬಿ. ಸುಬ್ರಹ್ಮಣ್ಯಂ,** ಅಧ್ಯಕ್ಷರು

## ಕೃತಜ್ಞತೆ

ಆತ್ಮೀಯರಿಗೆ ನಮಸ್ಕಾರ,



'ಬೃಹಚ್ಚರಣ' ಪತ್ರಿಕೆಯ ಸಂಪಾದಕ ಮಂಡಲಿಯಲ್ಲಿ 10 ವರ್ಷಗಳ ಸುದೀರ್ಘ ಸೇವೆ ಸಲ್ಲಿಸುವ ಅವಕಾಶ ನೀಡಿದ ಪ್ರತಿಯೊಬ್ಬರಿಗೂ ಧನ್ಯವಾದ.

ಶ್ರೀ ಆರ್. ರಮೇಶ್ ಅವರು ಸಂಪಾದಕರಾಗಿ ಉತ್ತಮ ಸೇವೆ ನೀಡುತ್ತಾರೆಂಬ ಭರವಸೆ ನನಗಿದೆ. ತಮ್ಮೆಲ್ಲರ ಸಲಹೆ-ಸೂಚನೆ, ಸಹಕಾರ ಎಂದಿನಂತಿರಲಿ. ಶುಭವಾಗಲಿ.

**ಕೆ.ಸಿ. ನಟರಾಜನ್**

# ಸುದ್ದಿ ಚಿತ್ರಗಳು

## ನಮ್ಮವರ ಮನೆಯಲ್ಲಿ ದಸರಾ ಹಬ್ಬ











Raghu



**ಕು|| ಶ್ರದ್ಧಾ**

ಸದಸ್ಯ ಶ್ರೀ ಅಜಯ್ ರಾಜಾಪುರ್ ಹಾಗೂ ಶ್ರೀಮತಿ ಲಕ್ಷ್ಮೀಶ್ರೀರವರ ಪುತ್ರಿ ಇಸ್ಕಾನ್ ಬರವಣಿಗೆ ಸ್ಪರ್ಧೆಯಲ್ಲಿ 2ನೇ ಬಹುಮಾನಗಳಿಸಿದ್ದಾರೆ.

* * *

**ಕು|| ಪೂಜಾ**

ಸದಸ್ಯ ಶ್ರೀ ಆರ್.ಪಿ. ಉಮಾಶಂಕರ್ ಹಾಗೂ ಶ್ರೀಮತಿ ಸುಧಾರವರ ಪುತ್ರಿ ಎಲ್.ಎಲ್.ಬಿ ಪದವಿಯನ್ನು ಪಡೆದಿರುತ್ತಾರೆ




ಸದಸ್ಯ ಶ್ರೀ **ವಿ. ಅಶೋಕ್** ಬಸವನಗುಡಿ ಕ್ಲಬ್‌ನ "Six Ball Handicap Snooker Tournament"ನಲ್ಲಿ ಪಾರಿತೋಷಕ ಪಡೆದಿರುತ್ತಾರೆ.





RICE

CERTIFICATE

THIS CERTIFICATE IS PROUDLY PRESENTED TO

Shivakumar Natarajan

For Participation in

ALL INDIA PHOTOGRAPHY COMPETITION - EXHIBITION

"MY BEAUTIFUL INDIA"

at ICCR(Nandalal Bose & Jamini Roy Art Gallery), Kolkata

16th to 19th September, 2021

Biman Kumar Bhattacharjee (Founder & Director)

Nupur Mazumder (Cofounder & Co-ordinator)




ಸದಸ್ಯ ಶ್ರೀ **ಶಿವಕುಮಾರ್,** ರೈಸ್ ಅಂತರರಾಷ್ಟ್ರೀಯ ಸಂಸ್ಥೆಯಿಂದ ಛಾಯಾಗ್ರಹಣ ಪ್ರಶಸ್ತಿ ಪತ್ರ ಪಡೆದಿರುತ್ತಾರೆ

**ಮೈ.ಮಂ.ದ್ರಾ. ಬೃಹಚ್ಚರಣ ಸಂಘ**
(ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಂಗ ಸಂಸ್ಥೆ)
**ನೂತನ ಕಾರ್ಯಕಾರಿ ಸಮಿತಿ**

ಶ್ರೀಯುತರುಗಳಾದ

**ಬಿ. ಸುಬ್ರಹ್ಮಣ್ಯಂ, 9449869667**
ಅಧ್ಯಕ್ಷರು

**ಎಚ್.ಕೆ. ಶಶಿಧರ್, 9845173766**
ಉಪಾಧ್ಯಕ್ಷರು

**ಎಸ್.ಪಿ. ಶ್ರೀನಿವಾಸ, 9483725949**
ಕಾರ್ಯದರ್ಶಿ

**ಅರುಣ್ ವಿ., 9880166001**
ಸಹಕಾರ್ಯದರ್ಶಿ

**ಎಸ್. ಸತ್ಯನಾರಾಯಣ, 9980945699**
ಖಜಾಂಚಿ

**ಟಿ.ಪಿ. ಸೂರ್ಯನಾರಾಯಣ, 9945484268**
ಸಹಖಜಾಂಚಿ

**ಆರ್. ಗಣೇಶ್ ಶ್ರೀಧರ್, 9880187686**
ಆಂತರಿಕ ಲೆಕ್ಕ ಪರಿಶೋಧಕರು

**ಸದಸ್ಯರು**

**ಜಿ.ವೆಂಕಟೇಶ್, 9916067503**
**ಕೆ. ಗುಂಡಪ್ಪ, 9845332315**
**ಕೆ.ಬಿ.ಎಸ್. ಶರ್ಮ, 9482087344**
**ಸರಸ್ವತೀ ನಟರಾಜನ್, 9480619730**
**ನಾಗೇಶ, 9980662118**
**ಕೆ.ಮಂಜುನಾರಾಯಣ್, 9886114279**
**ಕೆ.ಎಸ್. ಅರುಣ್, 9900313929**
**ಕೆ.ಎಸ್. ಅನಂತ, 9740444222**
**ಆರ್.ಎ. ಶ್ಯಾಮಸುಂದರ್, 9845205674**

ಲೆಕ್ಕಪರಿಶೋಧಕರು

**ಬಿ.ಎನ್. ಗೋವಿಂದ್ ಪ್ರಸಾದ್, 9845128229**

**'ಬೃಹಚ್ಚರಣ' ಪತ್ರಿಕೆಯ ಸಂಪಾದಕ ಮಂಡಳಿ**
ಸಂಘದ **ಅಧ್ಯಕ್ಷರು** ಹಾಗೂ **ಕಾರ್ಯದರ್ಶಿ**

**ಆರ್. ರಮೇಶ್, 9886034048**
ಸಂಪಾದಕರು

**ಕೆ.ಸಿ. ನಟರಾಜನ್, 9845113475**
ಸಲಹೆಗಾರರು

**ಲಲಿತಾ ರಮೇಶ್, 9945199637**
ಸದಸ್ಯರು

**ಬಿ.ಆರ್. ಅನಿಲ್ ರಮೇಶ್, 9980027189**
ಸದಸ್ಯರು

**ಎನ್. ಶಿವಕುಮಾರ್, 9886505505**
ಛಾಯಾಗ್ರಾಹಕರು

## ಸಂಪಾದಕೀಯ

**ಆತ್ಮೀಯ ಸಮುದಾಯದ ಬಂಧುಗಳೆ,**

ನನ್ನನ್ನು "ಬೃಹಚ್ಚರಣ" ಪತ್ರಿಕೆಯ ಸಂಪಾದಕನಾಗಿ ನೇಮಿಸಿರುವುದಕ್ಕೆ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ಮತ್ತು ನಿಕಟಪೂರ್ವ ಸಂಪಾದಕರಾದ ಶ್ರೀ ಕೆ.ಸಿ. ನಟರಾಜನ್‌ರವರಿಗೆ ನನ್ನ ವಿನಮ್ರ ಧನ್ಯವಾದಗಳು.

ಸಂಪಾದಕೀಯ ಪದವಿಯಿಂದ ನನ್ನ ಜವಾಬ್ದಾರಿ ಹೆಚ್ಚಾಗಿದೆ. ಈ ಪತ್ರಿಕೆಯನ್ನು ಹೊರತರುವುದಕ್ಕೆ ಈ ಕೆಳಕಂಡ ಪ್ರಕ್ರಿಯೆಗಳನ್ನು ಅನುಸರಿಸಬೇಕೆಂದು ಸದಸ್ಯರಲ್ಲಿ ಕೋರಿಕೆ.

ತಾವು ಕಳುಹಿಸುವ ಲೇಖನಗಳು ಕನ್ನಡ ಭಾಷೆ ಮತ್ತು ಸ್ವಯಂ ಲೇಖನವಾಗಿರಬೇಕು. ಯಾವುದೇ ಜಾಲತಾಣದ ಲೇಖನಗಳನ್ನು ಪ್ರಕಟಿಸುವುದಿಲ್ಲ. ಪತ್ರಿಕೆಗೆ ಕಳುಹಿಸಿದ ತಮ್ಮ ಲೇಖನಗಳನ್ನು ಹಿಂತಿರುಗಿಸಲಾಗುವುದಿಲ್ಲ. ಲೇಖನಗಳಲ್ಲಿ ತಮ್ಮ ಹೆಸರು, ಪೂರ್ಣ ವಿಳಾಸ ಮತ್ತು ದೂರವಾಣಿ ಸಂಖ್ಯೆಯ ವಿವರಗಳಿರಲಿ.

ಸಾಹಿತ್ಯ, ಅಧ್ಯಾತ್ಮ, ಹಬ್ಬದ ವಿಶೇಷತೆಗಳು, ಪ್ರವಾಸ ಕಥನಗಳು, ಪುಸ್ತಕ ಬಿಡುಗಡೆ, ಕವನ, ಚುಟುಕಗಳು, ಪಾಕಶಾಸ್ತ್ರ, ಚಿತ್ರಕಲೆ, ರಂಗೋಲಿ, ಕಸೂತಿ, ಸಂಗೀತ, ನೃತ್ಯ, ಕ್ರೀಡೆ, ವಿಜ್ಞಾನ, ಚರಿತ್ರೆ, ದೇಶಭಕ್ತಿ ಮತ್ತು ಇನ್ನಿತರ ಸಂಬಂಧಿತ ವಿಷಯಗಳ ಲೇಖನವಾಗಿರ ಬಹುದು. (ಚಿತ್ರಗಳೊಂದಿಗಿದ್ದರೆ ಉತ್ತಮ).

ಜನನ, ಉಪನಯನ, ವಿವಾಹ, ಗೃಹಪ್ರವೇಶ, ಪ್ರಶಸ್ತಿ, ವಿದ್ಯಾಭ್ಯಾಸ ಮತ್ತು ಕ್ರೀಡೆಯಲ್ಲಿ ಉನ್ನತ ಶ್ರೇಣಿ ಮತ್ತು ಇನ್ನಿತರ ಸವಿವರಗಳು ಮತ್ತು ಛಾಯಚಿತ್ರಗಳನ್ನು ದಯಮಾಡಿ ಪತ್ರಿಕೆಯ mmdbs.mag@gmail.comಗೇ ಕಳುಹಿಸಿ. ವಾಟ್ಸಾಪ್ ಮುಖಾಂತರ ಬಂದ ವಿವರಗಳನ್ನು ಪತ್ರಿಕೆಗೆ ಅಳವಡಿಸಿಕೊಳ್ಳಲು ಹೆಚ್ಚು ತ್ರಾಸವಾಗುತ್ತದೆ. ಆದ್ದರಿಂದ ಈ–ಮೈಲ್‌ಗೆ ತಲುಪಿಸಲು ಬಿನ್ನಹ. ಯಾವುದೇ ವಿವರಗಳನ್ನು ದೂರವಾಣಿ ಮೂಲಕ ತಿಳಿಸಿದರೆ ಅದನ್ನು ಪ್ರಕಟಿಸುವುದಿಲ್ಲ.

ಸದಸ್ಯರು ತಮ್ಮ ಕುಟುಂಬದ ಸ್ಪಷ್ಟ ಕಪ್ಪು–ಬಿಳಿಪು ಸಮೂಹ ಛಾಯಾಚಿತ್ರಗಳಿದ್ದಲ್ಲಿ ಅದನ್ನು ಪತ್ರಿಕೆಗೆ ಕಳುಹಿಸಿದರೆ ಪ್ರಕಟಿಸಲಾಗುವುದು. ಮುದ್ರಣದ ಬಗ್ಗೆ ನಿರ್ಧಾರ ಸಂಪೂರ್ಣ ಸಂಪಾದಕ ಮಂಡಳಿಯ ಸದಸ್ಯರ ವಿವೇಚನೆಯಾಗಿರುತ್ತದೆ.

ಸದಸ್ಯರು ಅಗಲಿದ ತಮ್ಮ ಸಂಬಂಧಿಕರ ವಯಸ್ಸು, ಸ್ಪಷ್ಟ ಛಾಯಾಚಿತ್ರ, ದಿನಾಂಕ ಮುಂತಾದ ವಿವರಗಳನ್ನು ನೀಡಬೇಕಾಗಿ ವಿನಂತಿ.

ತಮ್ಮ ಸಹಕಾರ ಎಂದಿನಂತಿರಲೆಂದು ಕೋರುತ್ತೇನೆ.



**ನಮಸ್ಕಾರಗಳು,**

◆ **ಆರ್.ರಮೇಶ್**
**9886034048**

# ಬಹೂಪಯೋಗಿ ತುಳಸಿ



**ಪ್ರ**ತಿ ವರ್ಷ ತುಳಸಿ ಹಬ್ಬ ಬರುವುದು ಕಾರ್ತಿಕ ಮಾಸದ ಶುಕ್ಲಪಕ್ಷದ ದ್ವಾದಶಿ ದಿನದಂದು. ಅಂದು ಶ್ರೀ ಹರಿಗೂ ಹಾಗೂ ತುಳಸಿದೇವಿಗೂ ವಿವಾಹವಾಯಿತು ಎಂದು ಪುರಾಣದಲ್ಲಿ ತಿಳಿದುಬರುತ್ತದೆ. ಶಿವ ಬಿಲ್ವ ಪ್ರಿಯನಾದರೆ ವಿಷ್ಣು ತುಳಸಿ ಪ್ರಿಯ. ಯಾವ ಪೂಜೆಯನ್ನು ಮಾಡಬೇಕಾದರೂ ತುಳಸಿ ಬೇಕೆ ಬೇಕು. ತುಳಸಿ ಇಲ್ಲದೆ ಪೂಜೆ ಪೂರ್ಣ ಆಗುವುದಿಲ್ಲ. ಯಾವುದೇ ದಾನ ಮಾಡ ಬೇಕಾದರೂ ತುಳಸಿಯನ್ನು ಸೇರಿಸಿ ದಾನ ಮಾಡಬೇಕು. ತುಳಸಿಗಿಡದ ದರ್ಶನ ಹಾಗೂ ಸ್ಪರ್ಶದಿಂದಲೇ ಪಾಪಗಳು ಪರಿಹಾರವಾಗುವುವು. ಮನೆಯಲ್ಲಿ ವಾಸ್ತು ದೋಷ, ರೋಗ ಬಾಧೆ, ದುಷ್ಟ ಶಕ್ತಿಗಳ ಕಾಟ ಪರಿಹಾರವಾಗುವುವು. ತುಳಸಿಯಲ್ಲಿ ಮೂರು ವಿಧ; ಕೃಷ್ಣ ತುಳಸಿ, ಶ್ರೀತುಳಸಿ ಮತ್ತು ಕಾಡು (ಕಪ್ಪು) ತುಳಸಿ. ಈ ತುಳಸಿಗೆ ಹಲವಾರು ಹೆಸರುಗಳಿವೆ. ಬಹುಮಂಜರಿ, ದೇವದುಂದುಭಿ, ಭಾರತೀ ಸುರಾನ – ಹೀಗೆ.

**ಪೌರಾಣಿಕ ಹಿನ್ನಲೆ**

ಸಮುದ್ರ ಮಥನದ ಸಮಯದಲ್ಲಿ ಬಂದಂತಹ ಅಮೃತ ಕಳಶವನ್ನು ಮಹಾವಿಷ್ಣು ಪಡೆದುಕೊಳ್ಳುತ್ತಾನೆ. ಆ ಸಮಯ ದಲ್ಲಿ ಆತನ ಕಣ್ಣಿಂದ ಆನಂದಬಾಷ್ಪ ಉಕ್ಕಿ ಹರಿಯತ್ತದೆ. ಅದರ ಒಂದೊಂದು ಹನಿ ಕಳಶದಲ್ಲಿ ಬಿದ್ದಾಗ ಅದು ತುಳಸಿ ಗಿಡವಾಯಿತು ಎಂದು ವಿಷ್ಣು ಪುರಾಣದಲ್ಲಿ ತಿಳಿಯುತ್ತದೆ.

**ವಾಸ್ತು ದೋಷಕ್ಕೆ**

* ಪ್ರತಿಯೊಬ್ಬರ ಮನೆ ಅಂಗಳದಲ್ಲಿ ಅಥವಾ ಹಿತ್ತಲಿನಲ್ಲಿ ತುಳಸಿಗಿಡ ಇರಬೇಕು. ಈ ಗಿಡವು ಹೆಚ್ಚಿನ ಪ್ರಮಾಣದಲ್ಲಿ ಆಮ್ಲಜನಕ ಬಿಡುಗಡೆ ಮಾಡುವುದರಿಂದ ಮನೆಯೊಳಗೆ ಕೆಟ್ಟ ಶಕ್ತಿ ಪ್ರವೇಶಿಸುವುದಿಲ್ಲ.

* ಮನೆಯ ಮುಖ್ಯದ್ವಾರದ ಬಾಗಿಲಿನ ಮುಂದೆ ತುಳಸಿಗಿಡ ಇದ್ದರೆ ದುಷ್ಟ ಶಕ್ತಿಗಳು ಒಳಗೆ ಬರುವುದಿಲ್ಲ.

* ಪ್ರತಿದಿನ ತುಳಸಿಯನ್ನು ಆಂಜನೇಯನಿಗೆ ಅರ್ಪಿಸಿದರೆ ಧೈರ್ಯ ಹೆಚ್ಚುವುದು.

* ತುಳಸಿ ಮಣಿಯಿಂದ ಜಪ ಮಾಡಿದರೆ ಮನಸ್ಸು ಏಕಾಗ್ರತೆಯಲ್ಲಿ ಇರುವುದು.

* ದಿನ ತುಳಸಿ ಎಲೆಯನ್ನು ನೀರಿನಲ್ಲಿ ಹಾಕಿ 1 ಗಂಟೆಯ ನಂತರ ಸೇವಿಸಿದರೆ ಮಾತಿನಲ್ಲಿ ಮೃದುತ್ವ ಇರುವುದು.

* ತುಳಸಿ ನೀರಿನಿಂದ ಮನೆಯನ್ನು ಪ್ರೋಕ್ಷಿಸಿದರೆ ದುಷ್ಟಶಕ್ತಿಯು ಮಾಯವಾಗುವುದು.

* ತುಳಸಿಗಿಡದ ಪಕ್ಕ, ಜಪ–ಧ್ಯಾನ ಮಾಡಿದರೆ ಮನಸ್ಸಿಗೆ ಆನಂದ ಸಿಗುವುದು.

* ಉತ್ಥಾನ ದ್ವಾದಶಿ ದಿನ (ತುಳಸಿ ಹಬ್ಬ) ಮುತ್ತೈದೆಯರು ತುಳಸಿಗಿಡಕ್ಕೆ ಪೂಜೆ ಮಾಡಿದರೆ ಉತ್ತಮ ಆರೋಗ್ಯ ಬರುವುದು.

* ತುಳಸಿಯನ್ನು ಸಾಲಿಗ್ರಾಮಕ್ಕೆ ಪ್ರತಿದಿನ ಅರ್ಪಿಸಿದರೆ ವಾಸ್ತು ದೋಷ ನಿವಾರಣೆಯಾಗುವುದು.

**ರೋಗ ನಿವಾರಕ ತುಳಸಿ**

* ಪ್ರತಿದಿನ ಬೆಳಗ್ಗೆ ಒಂದು ಚಮಚ ತುಳಸಿ ಚೂರ್ಣವನ್ನು ಸೇವಿಸಿದರೆ ರಕ್ತ ಶುದ್ಧಿಯಾಗುವುದು.

* ಒಂದು ಚಮಚ ತುಳಸಿ ರಸದೊಂದಿಗೆ ಕಾಳು ಮೆಣಸಿನ ಪುಡಿಯನ್ನು ಜೇನುತುಪ್ಪದೊಂದಿಗೆ ಪ್ರತಿದಿನ ಸೇವಿಸಿದರೆ ಜ್ವರದ ಬಾಧೆ ಕಡಿಮೆಯಾಗುವುದು.

* ತುಳಸಿ ಎಲೆ, ಕರ್ಪೂರದ ಎಣ್ಣೆ ಹಾಗೂ ಲವಂಗವನ್ನು ಸೇರಿಸಿ ಗುಳಿಗೆ ಮಾಡಿ ನೋವಿನ ಜಾಗಕ್ಕೆ ಇಟ್ಟರೆ ಹಲ್ಲುನೋವು ನಿವಾರಣೆಯಾಗುವುದು.

* ಆಸ್ತಮ ಇರುವವರಿಗೆ ಉಸಿರಾಟದ ತೊಂದರೆ ಇರು ವುದು. ಅವರು ತುಳಸಿ ರಸವನ್ನು ಪ್ರತಿದಿನ ಸೇವಿಸಬೇಕು.

* ತುಳಸಿ ಎಲೆಯನ್ನು ಅಗೆಯುವುದರಿಂದ ಬಾಯಿಯ ದುರ್ಗಂಧ ಹೋಗುವುದು.

* ತುಳಸಿ ರಸ, ಬೆಳ್ಳುಳ್ಳಿ ರಸವನ್ನು ಜೇನುತುಪ್ಪದೊಂದಿಗೆ ಸೇವಿಸಿದರೆ ಹೊಟ್ಟೆನೋವು ನಿವಾರಣೆಯಾಗುವುದು.

* ತುಳಸಿ ರಸ, ನಿಂಬೆ ರಸ, ಈರುಳ್ಳಿ ರಸವನ್ನು ಸೇರಿಸಿ ಚರ್ಮದ ಮೇಲೆ ಲೇಪಿಸಿದರೆ ಚರ್ಮರೋಗ ನಿವಾರಣೆ ಯಾಗುವುದು.

* ಪ್ರತಿದಿನ ತುಳಸಿ ರಸವನ್ನು ಬೆಳಗ್ಗೆ ಹಾಗೂ ರಾತ್ರಿ ಸೇವಿಸಿದರೆ ಸಕ್ಕರೆ ಖಾಯಿಲೆ ವಾಸಿಯಾಗುವುದು.

* ತುಳಸಿ ರಸ, ಶುಂಠಿ ರಸ ಹಾಗೂ ವಿಳ್ಳೆದೆಲೆ ರಸವನ್ನು ಜೇನುತುಪ್ಪದೊಂದಿಗೆ ಸೇವಿಸಿದರೆ ಕೆಮ್ಮು ಗುಣವಾಗುವುದು.

* ತುಳಸಿ ರಸ, ಅರಿಶಿನ ಪುಡಿಯನ್ನು ಕೊಬ್ಬರಿ ಎಣ್ಣೆ ಯಲ್ಲಿ ಸೇರಿಸಿ ಮುಖಕ್ಕೆ ಹಚ್ಚಿದರೆ ಮುಖದ ಕಾಂತಿ ಹೆಚ್ಚುವುದು.

* ಪ್ರತಿದಿನ ತುಳಸಿ ರಸವನ್ನು ರಾತ್ರಿ ಮಲಗುವಾಗ ಮುಖಕ್ಕೆ ಹಚ್ಚಿದರೆ ಮೊಡವೆ ಮಾಯವಾಗುವುದು.



◆ ಎಸ್. ಶ್ರೀನಿವಾಸಯ್ಯ
7899318098

# ಕಾಶಿ ಮಹಿಮೆ



ವರುಣಾ ಮತ್ತು ಅಸೀ ನದಿಗಳ ಮಧ್ಯೆ ಇರುವುದರಿಂದ "ವಾರಣಾಸಿ" ಎಂದು ಹೆಸರು. ಶಿವನ ಶಾಶ್ವತ ಸ್ಥಾನ. ಆದ್ದರಿಂದ "ಅವಿಮುಕ್ತ" ಕ್ಷೇತ್ರ ಎಂದು ಹೆಸರು. ಕಾಶಿಯಲ್ಲಿ ಕೃತ್ತಿವಾಸೇಶ್ವರ, ಮಧ್ಯಮೇಶ್ವರ, ವಿಶ್ವೇಶ್ವರ, ಜಂಕಾರೇಶ್ವರ, ಮತ್ತು ಕಪರ್ದೀಶ್ವರ ಎಂಬ ಐದು ಲಿಂಗಗಳು ರಹಸ್ಯವಾಗಿದ್ದು ಶಿವನ ಅನುಗ್ರಹವಿಲ್ಲದೆ ಕಾಣಲು ಸಾಧ್ಯವಿಲ್ಲ. ಚಂದ್ರಕಾಂತ ಶಿಲೆಯಲ್ಲಿ ನೀರು, ಸೂರ್ಯಕಾಂತ ಶಿಲೆಯಲ್ಲಿ ಅಗ್ನಿ, ಬೀಜದಲ್ಲಿ ಅಂಕುರವು ಇರುವುದೋ ಹಾಗೆ ಜೀವನಲ್ಲಿ ಪರಶಿವನು ಸ್ವಾಭಾವಿಕ ವಾಗಿರುವನು. ಆದರೆ ಜೀವನು ಅವಿದ್ಯೆ ಮೋಹಿತನಾಗಿ ಜ್ಞಾನ ಶೂನ್ಯನಾಗಿರುವನು. 84 ಲಕ್ಷ ಯೋನಿಗಳಲ್ಲಿ ಜನಿಸಿ ಸಂಸಾರ ಚಕ್ರದಲ್ಲಿ ಸುತ್ತುತ್ತಿರುವನು. ಆಯುಷ್ಯ ಮತ್ತು ಸುಖ-ದುಃಖಕ್ಕೆ ಜೀವಿಗಳ ಕರ್ಮವೇ ಮೂಲ ಕಾರಣ. ಸಂಸಾರದ ಕ್ಲೇಶಗಳನ್ನು ಕಳೆಯಲು ಜೀವನು ಶಿವನನ್ನು ಭಕ್ತಿಯಿಂದ ಆರಾಧಿಸಿ ಪಾಪಗಳೆಲ್ಲಾ ಶಿವನ ಅನುಗ್ರಹದಿಂದ ಕಳೆದ ನಂತರ ಮುಕ್ತಿ ಪಡೆಯುತ್ತಾನೆ. ಕಾಶಿ ಕ್ಷೇತ್ರವು ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾಗಿ ಮುಖ್ಯವಾಗಿದೆ.

* * *

ಪ್ರಣಾಮ ಮಾಡುವೆ ಪರಶಿವನೆ । ಪರಿಹರಿಸು ನೀ ಪಾಪವನೆ ॥
ಶಿವನೆ ನೀ ದಯ ತೋರದಿರೆ । ಭವನೆ ಪೊರೆಯುವರಾರಯ್ಯ ।
ಆರ್ತ ಮನದಿಂ ಕೂಗಿದರೆ । ಸಾರ್ಥಕ ಮಾಡುವೆ ಜನ್ಮವ ॥
ಗಣಪತಿ ಪಿತ ಗಂಗಾಧರನೆ । ಗೌರೀಪತಿ ಸಕಲಕಾಧಾರನೆ ॥
ಬೇಡಿದನೀವ ಭೋಲಾನಾಥ । ಭಕ್ತಿಯ ನೀಡು ಕಾಶೀನಾಥ ॥
ರುಂಡಮಾಲೆಯ ಧರಿಸಿಹೆ ಕೊರಳೊಳು । ಅಂಡಜವಾಹನ ಭಜನೆ ಹಗಲಿರುಳು ॥
ರಾಮನ ಭಜಿಸುವ ದೇವದೇವನೆ । ನಾಮವ ಜಿಹ್ವೆಯಲಿ ಹೇಳಿಸುವವನೆ ॥
ಧನ್ಯವಾಗಿಸು ಜೀವವ ನೀನು । ಮಾನ್ಯ ಮಾಡುವ ಮಹಾದೇವನೆ ॥
ಕೇಶವ ಶಿವರಲ್ಲಿ ಭೇದವಿಲ್ಲ । ಕೇಶವ ಭಗಿನಿ ಶಕ್ತಿ ಜಗವೆಲ್ಲಾ ॥

* * *

ಕಾಶಿಗೆ ಬನ್ನಿ ಬನ್ನಿ । ವಿಶ್ವನಾಥ ಎನ್ನಿ ಎನ್ನಿ ॥
ಗಂಗಾನದಿ ಸ್ನಾನ ಮಾಡಿ । ಮಂಗಳಾಂಗ ಶಿವನ ನೋಡಿ ॥
ಅಂಗ ಪ್ರದಕ್ಷಿಣೆ ಮಾಡಿ । ಸತ್ಯಸಂಗದಿ ಭಜನೆ ಹಾಡಿ ॥
ತ್ರಿಶೂಲಧರನು ಶಿವನು । ತ್ರಿನೇತ್ರಮೂರ್ತಿ ಭವನು ॥
ತ್ರಿಜಗ ವಂದ್ಯ ಈಶನು । ತ್ರಯಂಬಕ ಮುಕ್ತಿ ಈವನು ॥
ಬಿಲ್ವಪತ್ರದಿ ಪೂಜಿತ । ಭಸ್ಮಧಾರಿ ವಂದಿತ ॥
ಭವಾನಿ ಪತಿ ಭಕ್ತ ಸನ್ನುತ । ಬಸವ ಏರಿ ಬರುವ ದಾತ ॥

ಗಜಮುಖ ಷಣ್ಮುಖ ಸಹಿತ ಬಂದ । ಗಜಚರ್ಮಾಂಬರ ಶಿವನಿಂದ ॥
ಗೆಜ್ಜೆಯ ನಾದದಿ ಶಂಕರ ಬಂದ । ಘರ್ಜನೆ ಕೇಳಿ ಈಶ ಬಂದ ॥
ಕೇಶವ ಪೂಜಿತ ಗಿರಿಜಾಪತಿ । ಕೇಶ ಸುಂದರ ಜಗತ್ ಪತಿ ॥
ಕ್ಲೇಶನಾಶಕ ಪಂಪಾಪತಿ । ಕೇಶವ ಭಗಿನಿ ಉಮಾಪತಿ ॥

* * *

ಶಿವರಾತ್ರಿ ಶುಭರಾತ್ರಿ ಶಿವ ಭವನು ಒಲಿವ ರಾತ್ರಿ ॥
ಜಗದ ಜಾಗರಣೆ ರಾತ್ರಿ ಜನ್ಮ ಸಾಫಲ್ಯದ ರಾತ್ರಿ ॥
ಜಾವ ಜಾವಕೆ ಪೂಜ ರಾತ್ರಿ ಜನ್ಮಾಂತರದ ಪುಣ್ಯ ರಾತ್ರಿ ॥

ಶಂಕರನು ಶುಭಕರನು ಸಂಕಟಗಳ ಹರಿಸುವವನು ॥
ಶಶಾಂಕ ಶಿವ ಸುಂದರನು ಕಿಂಕರನ ಸಲಹುವನು ॥
ಕೈಲಾಸಾಧಿಪ ಶಿವನು ಕೈವಲ್ಯದಾತ ಭವನು ॥
ಕರ್ಮ ಕಳೆವ ಈಶನು ಕೇಶವ ಭಗಿನಿ ಸುಂದರೇಶನು ॥



◆ ಭ್ರಮರಾ ಗೋಪಿನಾಥ್
6366701153

**ಸಂಘಕ್ಕೆ ಹೊಸ ಸದಸ್ಯರು**

| | |
|---|---|
| 1. ಹೇಮ ಕೀರ್ತಿ ಚಂದ್ರ | 4. ನಾರಾಯಣ್ ವೈ.ಜಿ. |
| 2. ಚಂಪಾ ಎ. | 5. ಪ್ರಕಾಶ್ ಎಸ್. |
| 3. ಮನೋಜ್ ಸತ್ಯನಾರಾಯಣ | 6. ವಿಶ್ವಾಸ್ ಎನ್ |

**ಸಂಘಕ್ಕೆ ಹೊಸ ಪೋಷಕರು**

1. ದೀಪ್ತಿ ಶೇಖರ್ 2. ಶ್ಯಾಮಸುಂದರ್ ಬಿ.ಎಸ್.

**ಸಂಘವು ಆತ್ಮೀಯತೆಯಿಂದ ಸ್ವಾಗತಿಸುತ್ತದೆ.**

**ಗೃಹಪ್ರವೇಶ**

ಸಂಘದ ನಿಕಟಪೂರ್ವ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಟಿ.ಎಸ್. ರಮೇಶನ್‌ರವರ ಪುತ್ರಿ ಹಾಗೂ ಸದಸ್ಯೆ **ಶ್ರೀಮತಿ ಟಿ.ಆರ್. ಸುಷ್ಮಾ ಚಂದ್ರಶೇಖರ್**ರವರು ದಿನಾಂಕ 15.10.21ರಂದು "ಅನಂತ ವಿಶಾಲ ಸದನ"ದ ಗೃಹಪ್ರವೇಶ ನೆರವೇರಿಸಿದರು.

**ಸಂಘವು ಶುಭ ಹಾರೈಸುತ್ತದೆ**

ಕ್ಷೇತ್ರ ದರ್ಶನ

# ಮಾನಸ ಸರೋವರ ಯಾತ್ರೆ



**ಎಲ್ಲಿದೆ? :** ಮಾನಸ ಸರೋವರ ಭಾರತ – ನೇಪಾಳ ಗಡಿಯಲ್ಲಿರುವ ಕೈಲಾಸ ಪರ್ವತದಲ್ಲಿದೆ. ಸಮುದ್ರ ಮಟ್ಟದಿಂದ ಸುಮಾರು 14,950 ಅಡಿಗಳಷ್ಟು ಎತ್ತರದಲ್ಲಿದೆ. ಇಲ್ಲಿಗೆ ಹೋಗುವುದು ಜೀವನದ ಅತಿ ಮುಖ್ಯ ಕರ್ತವ್ಯ ಎಂಬುದು ನಂಬಿಕೆ.

**ಮಾನಸ ಸರೋವರ ವಿಶೇಷ :** ಕೈಲಾಸ ಪರ್ವತ ಶಿಖರವು ಪ್ರಪಂಚದ ಅತಿ ಎತ್ತರದ ಶಿಖರಗಳಲ್ಲಿ (ಸುಮಾರು 23,000 ಅಡಿಗಳು) ಒಂದು. ಇದಕ್ಕೆ ಅನೇಕ ಹೆಸರುಗಳಿವೆ. ಮೇರು, ಸುಮೇರು, ಸುಷುದ್ನು, ಹೇಮಾದ್ರಿ, ದೇವಪರ್ವತ, ಗಾನಪರ್ವತ, ರಜತಾದ್ರಿ, ರತ್ನ ಸ್ತಂಭ ಎಂಬ ಹೆಸರುಗಳೂ ಇವೆ. ಇದಕ್ಕೆ ರಾವಣ ಪರ್ವತ, ಹನುಮಾನ್ ಪರ್ವತ, ಪದ್ಮ ಸಂಭವ, ಮಂಜುಶ್ರೀ, ವಜ್ರಧರ, ಅವಲೋಕಿತೇಶ್ವರ ಎಂದೂ ಕರೆಯುತ್ತಾರೆ. ಇದು ಪಾರ್ವತಿ–ಪರಮೇಶ್ವರರ ಆವಾಸ ಸ್ಥಾನ. ಶಿವಶಕ್ತಿಯರು ಒಂದುಗೂಡಿದ ಜಾಗ. ಪ್ರಕೃತಿ ಪುರುಷರ ಮಿಲನ ಸ್ಥಾನ. ಜೀವಾತ್ಮ ಪರಮಾತ್ಮರ ಐಕ್ಯಸ್ಥಾನ. ವಿಶ್ವದ ರಚನೆ, ಸ್ಥಿತಿ, ಲಯಗಳಿಗೆ ಕಾರಣೀಭೂತವಾದ ಕೇಂದ್ರ ಬಿಂದು (Pillar of the Universe) ಮುಂತಾದವು. ಇದು ವರ್ಷದ ಎಲ್ಲಾ ಕಾಲವೂ ಹಿಮಾಚ್ಛಾದಿತವಾಗಿರುವುದು. ಈ ಸ್ಥಳವನ್ನು ದೂರದಿಂದ ದರ್ಶನ ಮಾಡಬಹುದೇ ಹೊರತು ಹತ್ತಲಾಗುವುದಿಲ್ಲ. ಇಚ್ಛೆಪಟ್ಟರೆ ಅದರ ಪರಿಕ್ರಮ ಮಾಡಬಹುದು. ಅದರ ಮಾರ್ಗ 50 ಕಿ.ಮೀ. ಅದರಲ್ಲಿ ನಂದಿ ಗೊಂಫ್, ದಿರಾಚಕ್, ಗೌರಿಕುಂಡ, ಜಾನುಲಾ ಪಾರ್ಕ್ ಎಂಬ ಸ್ಥಳಗಳು ಬರುವುವು.

**ಹೇಗೆ ಹೋಗಬೇಕು? ಯಾವಾಗ? :** ಪ್ರತಿ ವರ್ಷದ ಜೂನ್ ತಿಂಗಳಿಂದ ಸೆಪ್ಟೆಂಬರ್ ಕೊನೆಯ ವಾರದವರೆಗೆ (ಹಿಮ ಕಡಿಮೆ ಇರುವ ತಿಂಗಳುಗಳನ್ನು ಪರಿಗಣಿಸಿ) ಮಾನಸ ಸರೋವರ ಯಾತ್ರೆ ಕೈಗೊಳ್ಳಬಹುದು. ಇದು ನಾವು ಇಚ್ಛಿಸಿದಂತೆ ಕೈಗೊಳ್ಳುವ ಯಾತ್ರೆಯಲ್ಲ. ಭಾರತದ ವಿದೇಶಾಂಗ ಮಂತ್ರಾಲಯ "ಇಂಡೋ ಟಿಬೆಟಿಯನ್ ಬಾರ್ಡರ್ ಪೊಲೀಸ್" (ಐ.ಟಿ.ಬಿ.ಪಿ.) ನೇತೃತ್ವದಲ್ಲಿ ಈ ಯಾತ್ರೆಯನ್ನು ನೆರವೇರಿಸುತ್ತದೆ. ಹೋಗಲು ಬಯಸುವವರು ಈ ಐ.ಟಿ.ಬಿ.ಪಿ. ಪರೀಕ್ಷೆ ಎದುರಿಸಬೇಕು. ಇದು ಯಾತ್ರಾಕಾಂಕ್ಷಿಗಳ ದೈಹಿಕ, ಮಾನಸಿಕ ದೃಢತೆ ಹಾಗೂ ಸಾಮರ್ಥ್ಯ ಪರಿಶೀಲಿಸಿ ಯಾತ್ರೆಯ ಸಮಯ ನಿಗದಿಪಡಿಸುತ್ತಾರೆ. ಯಾತ್ರೆಯ ಅವಧಿ 28 ದಿನಗಳು. ಇದಕ್ಕಾಗಿ 40 ಸದಸ್ಯರ ವಿವಿಧ ತಂಡಗಳನ್ನು ರಚಿಸಲಾಗುತ್ತದೆ. ಈ ತಂಡದಲ್ಲಿ ಯಾತ್ರಾರ್ಥಿಗಳಲ್ಲದೆ ಭದ್ರತಾ ಸಿಬ್ಬಂದಿ, ನುರಿತ ವೈದ್ಯರೂ ಇರುತ್ತಾರೆ. ಯಾವ ತಂಡದಲ್ಲಿ ಹೋಗಬೇಕು ಎಂಬ ವಿವರವನ್ನು ಯಾತ್ರಾರ್ಥಿಗಳಿಗೆ ಕನಿಷ್ಠ ಆರು ತಿಂಗಳು ಮೊದಲೇ ತಿಳಿಸಲಾಗುತ್ತದೆ.

**ಯಾತ್ರೆಯ ಸಿದ್ಧತೆ :** ಮಾನಸ ಸರೋವರದ ಯಾತ್ರೆ ಉಳಿದ ತೀರ್ಥಯಾತ್ರೆಗಳಷ್ಟು ಸುಲಭವಾದದ್ದಲ್ಲ. ಇದಕ್ಕೆ ದಿನಕ್ಕೆ ಕನಿಷ್ಠ 10 ಕಿ.ಮೀ. ನಡೆಯುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಮಂಕಿ ಕ್ಯಾಪ್, ಸ್ವೆಟರ್, ಉಣ್ಣೆಯ ಕೈಕವಚ, ಥರ್ಮಲ್ ಬಟ್ಟೆಗಳು, ರೈನ್ ಕೋಟ್, ಹಿಮಪಾತ ತಡೆಯಬಲ್ಲ ಕೊಡೆ, ಸಣ್ಣ ಕತ್ತರಿ, ಚಾಕು, ಚಾರಣಕ್ಕೆ ಹೊಂದುವಂಥ ಬೂಟುಗಳು, ಹಿಮಪಾತವಾದರೆ ತಡೆಯಬಲ್ಲ ವಾಟರ್ ಪ್ರೂಫ್ ಬೂಟುಗಳು, ಮಂಜಿನ ಹೊಡೆತ ತಡೆಯಬಲ್ಲ ಕನ್ನಡಕ, ಧೂಳಿನಿಂದ ರಕ್ಷಿಸಬಲ್ಲ ಮುಖವಾಡ ಇವೆಲ್ಲ ಬೇಕೇಬೇಕು. ಅದು ನುರಿತರಿಂದ ಪರಿಶೀಲಿಸಲ್ಪಡುವುದು ಅನಿವಾರ್ಯ. ಇದರ ಜೊತೆಗೆ ಗ್ಲೂಕೋಸ್, ಚಾಕೊಲೇಟ್, ನೀರಿನ ಬಾಟಲಿಗಳು, ಪೋರ್ಟಬಲ್ ಆಕ್ಸಿಜೆನ್ ಸಿಲಿಂಡರ್‌ಗಳು, ಆಮ್ಲಜನಕ ಪರಿಮಾಣ ಹಾಗೂ ನಾಡಿ ಮಿಡಿತವನ್ನು ಏಕಕಾಲದಲ್ಲಿ ನೋಡಬಲ್ಲ ಪಲ್ಸ್ ಆಕ್ಸಿಮೀಟರ್ ಅವಶ್ಯವಾಗಿಬೇಕು.

**ಯಾತ್ರೆಯ ವಿಧಾನ :** ವಿಮಾನ, ರೈಲು, ಬಸ್ ಹೀಗೆ ಯಾವ ಮಾರ್ಗದಿಂದಲಾದರೂ ನೇಪಾಳದ ರಾಜಧಾನಿಯಾದ ಕಠ್ಮಂಡು ತಲುಪಬಹುದು. ಅಲ್ಲಿಂದಲೇ ಯಾತ್ರೆ ಆರಂಭ. ಅಲ್ಲಿಂದ ಅಧಿಕೃತ ಬಸ್ ಮೂಲಕ ಕಡೋರಿಗೆ ಪ್ರಯಾಣ. ಇದು ಚೀನಾದ ಗಡಿ. ಇಲ್ಲಿ ಪಾಸ್ಪೋರ್ಟ್ ಪರಿಶೀಲನೆ ನಂತರ ಮಾನಸ ಸರೋವರ ಯಾತ್ರೆಗೆ ಅನುಮತಿ ಇದೆ. ಇಲ್ಲಿಂದ ಸಿಂಕೋಲಾ ಎಂಬ ಹಳ್ಳಿಯವರೆಗೆ ಮಾತ್ರ ವಾಹನ ಸೌಲಭ್ಯವಿದೆ. ಚಾರಣ ಇಲ್ಲಿಂದಲೇ ಆರಂಭ. 6 ಕಿ.ಮೀ. ಕ್ಲಿಷ್ಟಕರ ಹಾದಿಯಲ್ಲಿ ನಡೆದರೆ 'ಗಾಲಾ' ಸಿಗುತ್ತದೆ. ಇದು ಬಹಳ ಸುಂದರವಾದ ಹಿಮನಗರಿ. ಕಾಳಿದಾಸನ 'ಮೇಘದೂತ'ದ ಕಾವ್ಯ ಕ್ಷೇತ್ರ ಇದೇ ಎಂದು ನಂಬಿಕೆ.

ಇಲ್ಲಿಂದ 4000 ಅಡಿ ಇಳಿಯಬೇಕು. ಇದು ಅತಿ ದುರ್ಗಮವಾದ ಹಾದಿ. ಭೂ ಕುಸಿತ, ಹಿಮಪಾತ ಇಲ್ಲಿ ಸರ್ವೇಸಾಮಾನ್ಯ. ಯಾತ್ರಿಗಳು ಈ ಸವಾಲನ್ನು ಎದುರಿಸಿ ಕೊಂಡೇ ಸಾಗಬೇಕು. ಹೀಗೆ ಸಾಗಿದರೆ 'ಮಲ್ಪಾ' ಸಿಗುತ್ತದೆ. ಅಲ್ಲಿಂದ ಕಿರಿದಾದ ಹಾದಿ ಮೂಲಕ 'ಬುಧಿ' ಸೇರಬೇಕು. ನಂತರ ಎರಡು ಸಾವಿರ ಅಡಿ ಹತ್ತಿದರೆ 'ಅನ್ನಪೂರ್ಣೇಶ್ವರಿ' ಪರ್ವತದ ಸಾಲು ಸಿಗುತ್ತದೆ. ಇಲ್ಲಿಂದ ಮುಂದೆ ಚಾರಣಕ್ಕೆ 'ಯಾಕ್' ಪ್ರಾಣಿಗಳ ಅಥವಾ ಟಿಬೆಟಿಯನ್ ಗೈಡುಗಳ ಸಹಾಯ ಬೇಕೇಬೇಕು. ಸುಮಾರು ನಾಲ್ಕು ಕಿ.ಮೀ. ನಡೆದರೆ 'ಗುಂಜಿ' ಸಿಗುತ್ತದೆ. ಇಲ್ಲಿ ಕಿರು ಕೈಲಾಸ ಪರ್ವತ ಕಾಣಿಸುವುದು. ಈ ಸ್ಥಳದಲ್ಲಿ ಐ.ಟಿ. ಬಿ.ಪಿ. ವೈದ್ಯರ ತಪಾಸಣೆ ಕಡ್ಡಾಯ. ಇದರಲ್ಲಿ ತೇರ್ಗಡೆಯಾದರೆ ಮಾತ್ರ ಮುಂದಿನ ಯಾತ್ರೆ, ಇಲ್ಲದಿದ್ದರೆ ಮಾನಸ ಸರೋವರ ಯಾತ್ರೆ ಇಲ್ಲಿಯೇ ಮೊಟಕುಗೊಳ್ಳುತ್ತದೆ.

**ಮಾನಸ ಸರೋವರ** : ಗುಂಜಿಯಿಂದ 'ಕಾಲಾಪಾನಿ'ವರೆಗೆ 10 ಕಿ.ಮೀ. ಹಿಮಪರ್ವತದ ಹಾದಿ. ಮಂಜು ಮುಸುಕಿದ ಪರ್ವತದ ನಡುವಿನ ಈ ಪ್ರಯಾಣಕ್ಕೆ ಆಮ್ಲಜನಕದ ಸಿಲಿಂಡರುಗಳು ಅವಶ್ಯವಾಗಿಬೇಕು. ಮಧ್ಯದಲ್ಲಿ ವೈದ್ಯರ ಚಿಕಿತ್ಸೆ ಅವಶ್ಯವಾಗಬಹುದು. ಅದಕ್ಕೆ ವ್ಯವಸ್ಥೆ ಇರುತ್ತದೆ. ಉತ್ತರಾಂಚಲದ ಮಂಡಲ್ ವಿಕಾಸ್ ನಿಗಮ್ ಇಲ್ಲಿ ಅನೇಕ ಚಿಕಿತ್ಸಾ ಶಿಬಿರಗಳನ್ನು, ಆಹಾರ ವ್ಯವಸ್ಥೆ ನಿರ್ವಹಣಾ ಠಾಣಗಳನ್ನು ನಿರ್ಮಿಸಿದೆ.

ದಾರಿಯಲ್ಲಿನ ಕೆಲವು ಗುಹೆಗಳಿಗೆ 'ವ್ಯಾಸಗುಹೆ' ಎಂಬ ಹೆಸರಿದೆ. ಪುರಾಣದ ವ್ಯಾಸರು ಇಲ್ಲಿದ್ದರು ಎಂಬ ನಂಬಿಕೆ ಇದೆ. ಇಲ್ಲಿ ಕಾಳಿ ದೇವಾಲಯವೂ ಇದೆ. ಹೀಗೆ 12,000 ಅಡಿ ಹತ್ತಿದಾಗ ನಾಭಿದಂಗ್ ಪರ್ವತ ಶ್ರೇಣಿಗೆ ಯಾತ್ರಿಗಳು ತಲುಪುವರು. ಇಲ್ಲಿ ಮಂಜುಗಡ್ಡೆಗಳಿಂದ ಉಂಟಾದ 'ಓಂ' ಎಂಬ ಸ್ವರೂಪ ಸ್ಪಷ್ಟವಾಗಿ ಕಾಣುತ್ತದೆ. ಈ ಪರ್ವತ ಶ್ರೇಣಿ ಯಲ್ಲಿ ಗಣಪತಿ–ಆಂಜನೇಯ ಮತ್ತು ಸಾಕ್ಷಾತ್ ಪರಶಿವ ನನ್ನೇ ಮಂಜುಗಡ್ಡೆಯ ಆಕೃತಿ ಮೂಲಕ ದರ್ಶನ ಮಾಡಿದ ಭಕ್ತಾದಿಗಳಿದ್ದಾರೆ. ನಾಭಿದಂಗಿನ 'ಹೋರೆ' ಎಂಬ ಶಿಬಿರ ದಲ್ಲಿ ಯಾತ್ರಿಗಳು ತಂಗಬೇಕು. ಮಂದಾರ ಪರ್ವತ ಮತ್ತು ಕೈಲಾಸ ಪರ್ವತದ ನಡುವಿನ ಈ ಜಾಗದಲ್ಲಿ ಮಾನಸ ಸರೋವರದ ದಾರಿ ಸಿಗುತ್ತದೆ. ಮೊದಲು ರಾವಣ ಶಿವನನ್ನು ಕುರಿತು ತಪಸ್ಸು ಮಾಡಿದನೆಂದು ನಂಬಲಾದ 'ರಾಕ್ಷಸ ಸರೋವರ' ಸಿಗುವುದು. ಇದನ್ನು ದಾಟಿದ ನಂತರ ಜದಿ ಶಿಬಿರ ಸಿಗುತ್ತದೆ.

**ಮಾನಸ ಸರೋವರ ಪ್ರವೇಶ :** ಇಲ್ಲಿ ಅಧಿಕಾರಿಗಳು ಮಾನಸ ಸರೋವರ ಪ್ರವೇಶಕ್ಕೆ ಪ್ರಾಕೃತಿಕ ಅನುಕೂಲ ಹೇಗಿದೆ ಎಂಬುದನ್ನು ಪರಿಶೀಲಿಸಿ ಯಾತ್ರಿಗಳನ್ನು ಬಿಡುತ್ತಾರೆ. ಕೆಲವೊಮ್ಮೆ 3–4 ದಿನಗಳ ಕಾಲ ಯಾತ್ರಿಗಳು ಇಲ್ಲಿ ತಂಗ ಬೇಕಾಗುತ್ತದೆ. ಇಷ್ಟೆಲ್ಲಾ ಸಾಹಸದ ನಂತರ ಮಾನಸ ಸರೋವರದ ದರ್ಶನ. ಅದರ ದರ್ಶನ ಈ ಎಲ್ಲಾ ಶ್ರಮ ವನ್ನು ಮರೆಸಬಲ್ಲಷ್ಟು ರಮ್ಯವಾಗಿದೆ. 'ಬ್ರಹ್ಮನ ಮನಸ್ಸು' ಎಂಬ ಕಲ್ಪನೆ ಇರುವ ಮಾನಸ ಸರೋವರದಲ್ಲಿ ಸೂರ್ಯ ರಶ್ಮಿ ಚಿನ್ನದ ರೇಖೆಯಂತೆ ಕಂಗೊಳಿಸುತ್ತದೆ. ಹಿಂಬದಿಯ ಕೈಲಾಸ ಪರ್ವತ ಭಕ್ತಿಭಾವ ಮೂಡಿಸುತ್ತದೆ. ರುದ್ರಾಭಿಷೇಕ, ರುದ್ರಯಾಗ ಸೇರಿದಂತೆ ಹಲವು ಧಾರ್ಮಿಕ ವಿಧಿಗಳನ್ನು ಇಲ್ಲಿ ನಡೆಸಲು ಅವಕಾಶವಿದೆ. ಅಪರ ವಿಧಿಗಳನ್ನು ಮಾಡುವವರೂ ಇದ್ದಾರೆ.

ಇಲ್ಲಿಂದ ಮುಂದೆ 'ತಾಲ್ಜೆನ್' ಎಂಬ ಜಾಗದಲ್ಲಿ ರಾತ್ರಿ ವಿರಮಿಸಿದ ನಂತರ 'ಕೈಲಾಸ ಪ್ರದಕ್ಷಿಣೆ' ಆರಂಭವಾಗುತ್ತದೆ. ದಕ್ಷಿಣಾಮೂರ್ತಿ ಇಂದ ಆರಂಭವಾಗುವ ಇದು ಪಶ್ಚಿಮಕ್ಕೆ, ಉತ್ತರಕ್ಕೆ ತಿರುಗಿ ಕೊನೆಗೆ 'ತಾಲ್ಜೆನ್' ಅಲ್ಲೇ ಕೊನೆಯಾಗು ತ್ತದೆ. ಇದರಲ್ಲಿ 20,000 ಅಡಿಯವರೆಗೂ ಹತ್ತಬೇಕು. ಗಟ್ಟಿಗರೇ ಇದನ್ನು ಸಾಧಿಸಬಲ್ಲರು. ಜೀವಹಾನಿಯ ಸಂಭವವೂ ಇರುವುದರಿಂದ ದೃಢ ನಿರ್ಧಾರ ಪರಿಶೀಲಿಸಿದ ನಂತರವೇ ಈ ಪರಿಕ್ರಮಕ್ಕೆ ಅವಕಾಶ. ನಂತರ, ಮಾನಸ ಸರೋವರವನ್ನು ಇದೇ ಮಾರ್ಗದಲ್ಲೇ ಇಳಿಯಬೇಕು. ಇಳಿಯುವಾಗ 'ಗೌರಿಕುಂಡ'ದ ದರ್ಶನ ಮಾಡುತ್ತಾರೆ.

**ಮಾನಸ ಸರೋವರ** : ಸದಾ ನೀರು ಹೆಪ್ಪುಗಟ್ಟಿರುವ ಇಲ್ಲಿನ ಪೂರ್ವದಲ್ಲಿ 'ಶಕ್ತಿ'ತತ್ವವನ್ನು ಪ್ರತಿನಿಧಿಸುವ ಕೈಲಾಸ ಪರ್ವತವೂ, ದಕ್ಷಿಣದಲ್ಲಿ 'ಧ್ಯಾನ' ತತ್ವ ಹೇಳುವ ಭೈರವನೂ, ಪಶ್ಚಿಮದಲ್ಲಿ 'ಅಹಂ' ತತ್ವ ಹೇಳುವ ನಂದಿಯೂ, ಉತ್ತರ ದಲ್ಲಿ 'ಕ್ರಿಯಾ' ತತ್ವವನ್ನು ಹೇಳುವ ಪಾರ್ವತಿ ಪರ್ವತವು ಗೋಚರಿಸುತ್ತದೆ. ಇದೇ ಮಾನಸ ಸರೋವರ ಯಾತ್ರೆಯ ಸಾರ್ಥಕ ಘಟ್ಟ.

**ಸಹಾಯ :** ಭಾರತ ಸರ್ಕಾರದ ವಿದೇಶಾಂಗ ಸಚಿವಾಲಯ, ಕುಮೌನ್ ಮಂಡಲ್ ವಿಕಾಸ್ ನಿಗಮ್, ಇಂಡೋ–ಟಿಬೆಟಿಯನ್ ಬಾರ್ಡರ್ ಪೊಲೀಸ್ ಯಾತ್ರೆಗೆ ನೆರವಾಗು ತ್ತದೆ. ಸಹಾಯ ವೆಚ್ಚ ರೂ. 45,000/– ಯಿಂದ ರೂ. 50,000/– ಇದಲ್ಲದೆ ಕುದುರೆ, ಸೇವಕ, ಯಾಕ್, ಕಟ್ಟುನಿಟ್ಟಾದ ವೈದ್ಯಕೀಯ ತಪಾಸಣೆ ಒದಗಿಸುತ್ತದೆ.

◆ **ಅನಿಲ್ ರಮೇಶ್**
9980027189



## ಸಂಘಕ್ಕೆ ವಾರ್ಷಿಕ ವೆಚ್ಚ ನೀಡಿರುವ ಸದಸ್ಯರು

ಶ್ರೀಯುತರು

| | | | |
|---|---|---|---|
| ಶೋಭಾ ಕುಲಕರ್ಣಿ | ಪೂರ್ಣಿಮಾ ಎಸ್. | ಶೇಖರ್ ಕೆ.ಸಿ. | ರಘು ಕುಮಾರ್ ಜಿ. |
| ಮಂಜುನಾರಾಯಣ ಕೆ. | ಭಾಸ್ಕರ್ ಡಿ.ವಿ. | ವಾಸು ಎಸ್. | ರಾಮಸ್ವರೂಪ್ ಟಿ.ಎಸ್. |
| ಉಮೇಶ್ ಎಸ್. | ನಾಗವೇಣಿ ಭಾಸ್ಕರ್ | ಸೂರ್ಯಕುಮಾರಿ | ಮುತ್ತು ಸ್ವಾಮಿ ಜಿ. |
| ವಿಶಾಲಾಕ್ಷಿ ಆರ್. | ನಕುಲ್ ಭಾಸ್ಕರ್ | ಭಗವಾನ್ ಆರ್. | ನರಸಿಂಹನ್ ವಿ. |
| ಪಾರ್ವತಿ ದೇವಿ | ಶ್ರೀನಿವಾಸನ್ ಎ.ವಿ. | ಉದಯ್ ಬಿ. ರಾಜಾಪುರ | ರಾಜಣ್ಣ ಕೆ. |
| ರಘು ಎ.ಆರ್. | ಶಂಕರ ಪ್ರಸಾದ್ ಬಿ.ಆರ್. | ಸಂಜಯ್ ರಾಜಪುರ | ಜಯರಾಮನ್ ಬಿ.ವಿ. |
| ರಜನಿ | ಅಕ್ಷಯ ಅತ್ರೇಯ | ಅಜಯ್ ಆರ್.ಬಿ. | ಗಿರಿಜಾದೇವಿ ಎಂ. |
| ರಂಜನಿ ದತ್ತಾ | ಈಶ್ವರನ್ ಎ. | ಧಾತ್ರಿ ಆರ್. ಪ್ರಸಾದ್ | ಅತ್ರೇಶ್ ಎಸ್. |
| ರವಿ ಎ.ಆರ್. | ಶ್ರೀನಿವಾಸ ಎಸ್.ಸಿ. | ರಾಹುಲ್ ಶ್ರೀನಿವಾಸ್ | ಶರ್ಮಾ ಎ.ಆರ್. |
| ಸೂರ್ಯಪ್ರಕಾಶ್ ಬಿ.ಎ. | ರಾಮಕೃಷ್ಣ ಸಿ. | ವೀಣಾ ಪ್ರಸಾದ್ | ಶುಭಾ ಬಿ.ಸಿ. |
| ಸತೀಶ ಬಿ.ಎಸ್. | ವೆಂಕಟೇಶ್ ಆರ್.ಎಸ್. | ಮಂಜುಳಾ ಟಿ.ಆರ್. | ರವಿ ಶಂಕರ್ ಎಲ್. |
| ಕರ್ನಲ್ ರಾಜನ್ ವಿ.ಜಿ. | ವೇಣುಗೋಪಾಲ್ ಎಚ್.ಪಿ. | ರಾಘವ ಪ್ರಸಾದ್ ಎಸ್.ಸಿ. | ವೆಂಕಟೇಶ್ ಎಲ್. |
| ಸೂರ್ಯನಾರಾಯಣ ಬಿ.ಎಸ್. | ಮುರಳಿ ಕೆ.ಬಿ. | ಶೇಷಾದ್ರಿ ಬಿ.ವಿ. | ಸುನಂದಾ ರತನ್ ಕುಮಾರ್ |
| ಗುಂಡಪ್ಪ ಕೆ. | ನಟರಾಜ್ ಬಿ.ಸಿ. | ಸ್ವಾಮಿನಾಥನ್ ಆರ್.ಎನ್. | ಸಂಧ್ಯಾ ಬಿ. |
| ಲೀಲಾವತಿ ಜಿ. | ಗೌರಿ ನಟರಾಜ್ | ಮಂಜುನಾಥನ್ ಆರ್.ಎನ್. | ವಿಶ್ವನಾಥ ಶರ್ಮ ಎ.ಕೆ. |
| ಗುರು ಪ್ರಸನ್ನ ಜಿ. | ರಂಗನಾಥ ಪ್ರಸಾದ್ ಬಿ.ಎಸ್. | ವಿಜಯ್ ಕುಮಾರ್ ಎಸ್.ಆರ್. | ನಯನ್ ಕುಮಾರ್ ಎಸ್. |
| ವಿದ್ಯಾ ಮೂರ್ತಿ | ರಾಮೇಶ್ವರ ಪ್ರಸಾದ್ | ಗೋವಿಂದ ಪ್ರಸಾದ್ ಬಿ.ಎನ್. | ಶ್ರೀನಿವಾಸ ಎನ್. |
| ಶರ್ಮಾ ಕೆ.ಬಿ.ಎಸ್. | ಉಮೇಶ್ ಎಸ್. | ಕುಮಾರ್ ಬಿ.ಎನ್.ಜಿ. | ನಾಗರತ್ನ ಎ. |
| ಭರತ್ ಶರ್ಮ | ಗಿರಿ ಶಾಸ್ತ್ರಿ | ಶ್ರೀರಾಮ್ ಬಿ.ಜಿ. | ಕೃಷ್ಣ ಸ್ವಾಮಿ ಛಾಯಾಪತಿ |
| ಗಣೇಶ ಶ್ರೀಧರ್ | ಪ್ರಸಾದ್ ಜಿ.ಎನ್. | ಸದಾನಂದ ಎಚ್.ಕೆ. | ಶೇಷಾದ್ರಿ ಬಾಬ್ |
| ರೂಪ ಶ್ರೀ ಎಂ. | ಸತ್ಯ ಪ್ರಸಾದ್ ಎಸ್.ಆರ್. | ರವೀಂದ್ರ ಶರ್ಮಾ | ಸುಬ್ರಮಣ್ಯ ಎಸ್.ಜಿ. |
| ಅಭಯ್ ಗಣೇಶ್ | ನಾಗೇಶ್ | ಸೇತೂರಾಂ ಕೆ.ಜಿ. | ರೇವತಿ ಚಂದ್ರಶೇಖರ್ |
| ವನಿತಾ ಮಂಜುನಾರಾಯಣ್ | ಮಧುಸೂಧನ್ ಕೆ.ಎಸ್. | ಜಗನಾಥ್ ಟಿ. | ವಿನಾಯಕ ವಿ. |
| ಸೋಮಸುಂದರ ಎಸ್. | ವಿ.ಎಸ್. ಮಣಿ | ಪದ್ಮಾ ಜೆ. | ಸುಬ್ರಮಣ್ಯಂ ವಿ. |
| ಚಂದ್ರಶೇಖರ್ ಎಸ್. | ಮಾತಂಗ್ ಶೇಷಗಿರಿ | ಶ್ರೀನಿವಾಸನ್ ಕೆ.ಎಸ್. | ಸುರೇಶ್ ರಾಜಗೋಪಾಲ್ |
| ರಘುನಂದನ್ ಎಸ್. | ಯಶೋದರ ಉಡಪ | ಮೋಹನ್ ಎಸ್. | ನರೇಂದ್ರ ವಿ. |
| ಡಾ. ರಮಾದೇವಿ ಎಸ್. | ದಿಲೀಪ್ ಕುಮಾರ್ ಆರ್. | ಬದರಿನಾರಾಯಣ್ ಎಚ್.ಆರ್. | ಇಂದಿರಾ ಜೆ. |
| ಮಂಜುನಾಥ ಡಿ. | ವಿಶ್ವನಾಥ್ ಎನ್. | ಕುಮಾರ್ ಬಿ.ಸಿ. | ರಮೇಶ್ ಆರ್. |
| ನಿತಿನ್ ಭಾಸ್ಕರ್ | ನಿರ್ಮಲಾ ಎಸ್. | ಗಣಪತಿ ಆರ್. | ಲಲಿತಾ ರಮೇಶ್ |

## ಸರ್ವಸದಸ್ಯರ ಸಭೆ ದಿನ ನೀಡಿದ ಕಾಣಿಕೆ

| | |
|---|---|
| ಅರುಣ್ ವಿ. | ಶಂಕರ ಪ್ರಸಾದ್ ಬಿ.ಆರ್. |
| ಗಣೇಶ ಶ್ರೀಧರ್ ಆರ್. | ಸೋಮಸುಂದರ ಎಸ್. |
| ಸೋಮಸುಂದರ್ ಎಸ್. | ಸುಂದರ್ ನಡವತ್ತಿ ಎನ್.ವಿ. |
| ಶ್ರೀನಿವಾಸ ಎಸ್.ಸಿ. | ಸುಮನಾ ಸತ್ಯನಾರಾಯಣ |
| ಗುಂಡಪ್ಪ ಕೆ. | ಕುಪ್ಪು ಸ್ವಾಮಿ |
| ಅನಂತ ಕೆ.ಎಸ್. | ರಮೇಶ್ ಆರ್.ಎಸ್. |
| ಸೂರ್ಯನಾರಾಯಣ ಟಿ.ಪಿ. | ರಾಜೇಶ್ವರಿ ಆರ್. |
| ಸುಬ್ರಮಣ್ಯಂ ಬಿ. | ರವಿಕುಮಾರ್ ಎಸ್. |

## ಹಿರಿಯ ಸದಸ್ಯರ ಅನಿಸಿಕೆ



ಅಟ್ಟೂರು ರಾಮಕೃಷ್ಣರವರು ತಮ್ಮ ಪುಸ್ತಕ 'Adventures of a Border Roads Jawan'ದ ಬಗ್ಗೆ ಲೇಖನವನ್ನು ಬೃಹಚ್ಚರಣ ಪತ್ರಿಕೆಯಲ್ಲಿ ಪ್ರಕಟಿಸಿರುವುದಕ್ಕೆ ಶ್ರೀ ಆರ್. ರಮೇಶ್ ಮತ್ತು ಸಂಘದ ಅಧ್ಯಕ್ಷರು ಮತ್ತು ಇತರ ಎಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಿಗೆ ಧನ್ಯವಾದ ಅರ್ಪಿಸಿದ್ದಾರೆ.

**ಅಟ್ಟೂರು ರಾಮಕೃಷ್ಣ ಶರ್ಮ**

# 2020–21ರ ಸಂಘದ ಸರ್ವಸದಸ್ಯರ ಸಭೆಯ ಪಕ್ಷಿನೋಟ



**ಈ** ವರ್ಷವೂ ಕೇಂದ್ರ ಮತ್ತು ರಾಜ್ಯ ಸರ್ಕಾರದ ಕೋವಿಡ್ ಮಾರ್ಗಸೂಚಿಯ ನಿಯಮಗಳನ್ನು ಅನುಸರಿಸಿ ದಿನಾಂಕ 3.10.2021ರ ಭಾನುವಾರದಂದು ಬಸವನಗುಡಿಯ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ಆವರಣದಲ್ಲಿರುವ ಶ್ರೀ ಭ್ರಮರಾಂಬಿಕ ಮಂಗಳ ಸದನದಲ್ಲಿ ಸಂಘದ ಸರ್ವಸದಸ್ಯರ ಸಭೆ ನಡೆಯಿತು. ಸಂಪೂರ್ಣವಾಗಿ ಕೋವಿಡ್ ನಿಯಂತ್ರಣಕ್ಕೆ ಬಂದಿಲ್ಲದಿರುವುದರಿಂದ ಎಂದಿನಂತೆ ನಡೆಸಬೇಕಾಗಿದ್ದ "ಹಿರಿಯ ಚೇತನರ ಸನ್ಮಾನ" ಮತ್ತು "ಪ್ರತಿಭಾ ಪುರಸ್ಕಾರ" ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಲಿಲ್ಲ.

ಸಂಘದ ಉಪಾಧ್ಯಕ್ಷರಾದ ಶ್ರೀ ಹೆಚ್.ಕೆ. ಶಶಿಧರ್‌ರವರು ಅಂದಿನ ಕಾರ್ಯಕ್ರಮವನ್ನು ನಿರೂಪಿಸಿದರು. ಸಭೆಯು ಬೆಳಿಗ್ಗೆ 11ಕ್ಕೆ ಕುಮಾರಿ ಆರ್.ಎಸ್. ವೃಂದಾ ಮತ್ತು ಕುಮಾರಿ ಪ್ರಿಯಾ ದೇಶಪಾಂಡೆಯವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಸಂಘದ ವತಿಯಿಂದ ಅವರಿಬ್ಬರಿಗೆ ಪ್ರೋತ್ಸಾಹ ಪೂರ್ವಕವಾಗಿ ನೆನಪಿನ ಕಾಣಿಕೆಗಳನ್ನು ನೀಡಲಾಯಿತು.

ಈ ಸಾಲಿನಲ್ಲಿ ನಮ್ಮನ್ನು ಅಗಲಿದ ಸದಸ್ಯರು ಮತ್ತು ಸಮುದಾಯದವರ ಹೆಸರುಗಳನ್ನು ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಸರಸ್ವತೀ ನಟರಾಜನ್‌ರವರು ಓದಿದ ನಂತರ ಒಂದು ನಿಮಿಷದ ಮೌನ ಆಚರಿಸುವ ಮೂಲಕ ಶ್ರದ್ಧಾಂಜಲಿ ಅರ್ಪಿಸಲಾಯಿತು.



ಇದಾದ ಮೇಲೆ ಸಂಘದ ಉಪಾಧ್ಯಕ್ಷರಾದ ಹೆಚ್.ಕೆ. ಶಶಿಧರ್‌ರವರು ಸಂಘದ ಪದಾಧಿಕಾರಿಗಳಾದ ಅಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ, ಇತರ ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ನೆರೆದಿದ್ದ ಸಮುದಾಯದ ಸದಸ್ಯರನ್ನು ಆದರದಿಂದ ಸ್ವಾಗತಿಸಿ ಸಂಘದ ಕಾರ್ಯಕಾರಿ ಸಮಿತಿಯ ಚುಣಾವಣೆಯ ವಿಷಯವನ್ನು ಪ್ರಸ್ತಾಪಿಸಿದರು.

ಸಂಘವು ದಶಮಾನೋತ್ಸವ ಸಂಭ್ರಮದೊಂದಿಗೆ 10ನೆಯ ವರ್ಷಕ್ಕೆ ಕಾಲಿಟ್ಟು ಮುನ್ನಡೆಯುತ್ತಿದೆ. ಈ ಸಂದರ್ಭದಲ್ಲಿ ಎಂ.ಎಂ.ಡಿ.ಬಿ.ಎಸ್. ಕೈಪಿಡಿ ಬಿಡುಗಡೆ ಮತ್ತು ಸಂಘದ ವೆಬ್‌ಸೈಟ್‌ನ್ನು ಉದ್ಘಾಟಿಸಲಾಗುತ್ತದೆ ಎಂದು ತಿಳಿಸಿದರು.

ಸಂಘದ ಕಾರ್ಯದರ್ಶಿಗಳಾದ ಶ್ರೀ ಎಸ್.ಸಿ. ಶ್ರೀನಿವಾಸ್‌ರವರು ವಾರ್ಷಿಕ ವರದಿಯನ್ನು ಓದಿದರು. ಖಜಾಂಚಿಗಳಾದ ಶ್ರೀ ಸತ್ಯನಾರಾಯಣರವರು 2020–21ನೇ ಸಾಲಿನ ಆಯವ್ಯಯ ಪತ್ರ ಮಂಡಿಸಿದರು. ಹಾಜರಿದ್ದ ಸದಸ್ಯರು ಕೈ ಎತ್ತುವ ಮೂಲಕ ಸರ್ವಾನುಮತದಿಂದ ಅನುಮೋದಿಸಿದರು.



ಸಂಘದ ಲೆಕ್ಕಪರಿಶೋಧಕರು ಮತ್ತು ಚುನಾವಣಾ ಅಧಿಕಾರಿಯಾದ ಶ್ರೀ ಬಿ.ಎನ್. ಗೋವಿಂದ್ ಪ್ರಸಾದ್‌ರವರು ನೂತನ ಕಾರ್ಯಕಾರಿ ಸಮಿತಿ ಸದಸ್ಯರ ನಾಮಪತ್ರಗಳನ್ನು ಪರಿಶೀಲಿಸಿ 19 ಸದಸ್ಯರ ಹೆಸರುಗಳನ್ನು ಓದಿದರು. ಅಧ್ಯಕ್ಷರು ಮತ್ತು ಇತರ ಪದಾಧಿಕಾರಿಗಳನ್ನು ಮುಂದಿನ ಕಾರ್ಯಕಾರಿ ಸಮಿತಿ ಸದಸ್ಯರ ಸಭೆಯಲ್ಲಿ ತೀರ್ಮಾನಿಸಲಾಗುತ್ತದೆ ಎಂದು ತಿಳಿಸಿದರು.

ಮುಂದೆ ಸಂಘದ ಸದಸ್ಯರ ಅನಿಸಿಕೆ ತಿಳಿಸುವಾಗ ನಿಕಟ ಪೂರ್ವ ಅಧ್ಯಕ್ಷರಾದ ಶ್ರೀ ಸೋಮಸುಂದರ, ನಿಕಟ ಪೂರ್ವ ಕಾರ್ಯದರ್ಶಿಗಳಾದ ಶ್ರೀ ವಿ.ಎಸ್. ಮಣಿ, ಸದಸ್ಯ

ಶ್ರೀ ಬಿ.ಸಿ. ನಟರಾಜ್‌ರವರು ತಮ್ಮ ಸಲಹೆಗಳನ್ನು ನಿವೇದಿಸಿದರು.

ಸಂಘದ ಅಧ್ಯಕ್ಷರಾದ ಶ್ರೀ ಬಿ. ಸುಬ್ರಹ್ಮಣ್ಯಂರವರು ಸದಸ್ಯರ ಸಲಹೆಗಳನ್ನು ಪರಿಶೀಲಿಸುವುದಾಗಿ ತಿಳಿಸಿದರು. ನಂತರ ಅವರು ವಾರ್ಷಿಕ ನಿರ್ವಹಣಾ ವೆಚ್ಚ ಮತ್ತು ಸದಸ್ಯತ್ವ ಉನ್ನತೀಕರಣದ ವಿಷಯಗಳನ್ನು ಪ್ರಸ್ತಾಪಿಸಿದರು.

ಸಂಘದ ಸದಸ್ಯರ ಕೈಪಿಡಿಯನ್ನು ನಿಕಟಪೂರ್ವ ಅಧ್ಯಕ್ಷ ಹಾಗೂ ಕಾರ್ಯದರ್ಶಿಗಳಾದ ಶ್ರೀಯುತ ಸೋಮಸುಂದರ ಮತ್ತು ವಿ.ಎಸ್. ಮಣಿಯವರು ಬಿಡುಗಡೆ ಮಾಡಿದರು. ಈ ಕಾರ್ಯದಲ್ಲಿ ಶ್ರಮವಹಿಸಿದ ಎಲ್ಲರಿಗೂ ಧನ್ಯವಾದ ಅರ್ಪಿಸಲಾಯಿತು. ಈ ಸಂದರ್ಭದಲ್ಲಿ ಇವರಿಬ್ಬರನ್ನೂ ಗೌರವಿಸಿ ಸನ್ಮಾನಿಸಲಾಯಿತು. ಶ್ರೀಯುತರಿಬ್ಬರೂ ತಮ್ಮ ಅನಿಸಿಕೆ ತಿಳಿಸಿ ಧನ್ಯವಾದ ಅರ್ಪಿಸಿದರು.

ಬೃಹಚ್ಚರಣ ಸಂಘದ "mmdbs.in" ಜಾಲತಾಣವನ್ನು ಸಂಘದ ಪೋಷಕರಾದ ಶ್ರೀ ಎಸ್. ಉಮೇಶ್‌ರವರು ಉದ್ಘಾಟಿಸಿದರು. ಎರಡು ಟಿವಿಗಳ ಮೂಲಕ ಈ ಉದ್ಘಾಟನೆಯನ್ನು ಸಮುದಾಯದವರು ವೀಕ್ಷಿಸಲು ಏರ್ಪಡಿಸಲಾಗಿತ್ತು. ಜಿ. ಮಹೇಂದ್ರರವರು ಜಾಲತಾಣ ತಯಾರಿಕೆಯಲ್ಲಿ ಕಾರ್ಯ ನಿರ್ವಹಿಸಿದ್ದಕ್ಕೆ ಅವರನ್ನು ಸಭೆಗೆ ಪರಿಚಯಿಸಿ ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು. ಹಾಗೆಯೇ ಜಾಲತಾಣದ ಉಪಸಮಿತಿ ಸದಸ್ಯರಿಗೂ ಅಧ್ಯಕ್ಷರು ಧನ್ಯವಾದ ಅರ್ಪಿಸಿದರು.

ಸಂಘವು 10 ವರ್ಷಗಳನ್ನು ಪೂರೈಸಿದಂತೆ "ಬೃಹಚ್ಚರಣ" ಪತ್ರಿಕೆಯೂ 10 ವರ್ಷ ದಾಟಿದೆ. ಈ ಸುಸಂದರ್ಭದಲ್ಲಿ ಪತ್ರಿಕೆಯು ವರ್ಣರಂಜಿತವಾಗಿ ಮತ್ತು ಸುಂದರವಾಗಿ ಹೊರಬರುತ್ತಿರುವುದಕ್ಕೆ ಕಾರಣರಾದ ಹಿಂದಿನ ಸಂಪಾದಕರಾದ ಶ್ರೀ ಮಧುಸೂದನ್ ಮತ್ತು ಹಾಲಿ ಸಂಪಾದಕರಾದ ಶ್ರೀ ಕೆ.ಸಿ. ನಟರಾಜನ್‌ರವರನ್ನು ಗೌರವಿಸಲಾಯಿತು. ಈ ಕಾರ್ಯದಲ್ಲಿ ಸಂಘಕ್ಕೆ ಅಚ್ಚುಕಟ್ಟಾಗಿ ಪತ್ರಿಕೆ ಮುದ್ರಿಸಿ ಕೊಡುತ್ತಿರುವ ಕೀರ್ತಿ ಪ್ರಿಂಟರ್ಸ್‌ನ ಶ್ರೀ ವಿದ್ಯಾನಂದರವರನ್ನು ಗೌರವಿಸಲಾಯಿತು. ಪತ್ರಿಕೆಗೆ ಸತತವಾಗಿ ಛಾಯಾಚಿತ್ರ ತೆಗೆದು, ಪರಿಷ್ಕರಿಸುತ್ತಿರುವ ಶ್ರೀ ಶಿವಕುಮಾರ್‌ರವರನ್ನು ಸನ್ಮಾನಿಸಲಾಯಿತು.

ಬೃಹಚ್ಚರಣ ಸಂಘದ ಲೆಕ್ಕಪರಿಶೋಧಕರು ಶ್ರೀಯುತ ಬಿ.ಎನ್. ಗೋವಿಂದ್ ಪ್ರಸಾದ್ ಮತ್ತು ಬಿ.ಎನ್.ಜಿ. ಕುಮಾರ್‌ರವರನ್ನು ಸನ್ಮಾನಿಸಲಾಯಿತು.

ಹಿಂದಿನ ಕಾರ್ಯಕಾರಿ ಸಮಿತಿ ಸದಸ್ಯರ ನಿಸ್ವಾರ್ಥ ಸೇವೆಯನ್ನು ಸ್ಮರಿಸಿ ಸಂಘದ ಏಳಿಗೆಗಾಗಿ ಶ್ರಮಿಸಿದ ಎಲ್ಲಾ ಸದಸ್ಯರನ್ನು ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಸನ್ಮಾನಿಸಿದರು. ನೂತನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಶ್ರೀಯುತರಾದ ಸೋಮಸುಂದರ ಮತ್ತು ವಿ.ಎಸ್. ಮಣಿ ಯವರು ಗೌರವಿಸಿದರು.

ಸಂಘದ ದಶಮಾನೋತ್ಸವ ಸಂದರ್ಭದಲ್ಲಿ ಸಂಘದ ಕಾರ್ಯಚಟುವಟಿಕೆ ಮತ್ತು ಸಂಘ 10 ವರ್ಷ ಬೆಳೆದು ಬಂದು ದಾರಿಯನ್ನು ಪವರ್ ಪಾಯಿಂಟ್ ಪ್ರೆಸೆಂಟೇಶನ್ ಮೂಲಕ ಸಂಘದ ನೂತನ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಆರ್. ರಮೇಶ್‌ರವರು ಸದಸ್ಯರಿಗೆ ಟಿವಿ ಮೂಲಕ ಪ್ರದರ್ಶಿಸಿ ವಿವರಿಸಿದರು.

ಈ ಸಂದರ್ಭದಲ್ಲಿ ಅಧ್ಯಕ್ಷರಾದ ಶ್ರೀ ಸುಬ್ರಹ್ಮಣ್ಯಂರವರು ಎಂ.ಎಂ.ಡಿ.ಬಿ.ಎಸ್. ಸದಸ್ಯರ ಕೈಪಿಡಿ ಮತ್ತು ಸಂಘದ ಜಾಲತಾಣವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ವಿನಂತಿಸಿದರು. ಸದಸ್ಯರ ಸಂಖ್ಯೆ ಹೆಚ್ಚಾಗಬೇಕು ಹಾಗೂ ಸದಸ್ಯರು ವಾರ್ಷಿಕ ನಿರ್ವಹಣಾ ವೆಚ್ಚವನ್ನು ನೀಡಬೇಕೆಂದು ಕೋರಿದರು.

ಸಂಘದ ಉಪಾಧ್ಯಕ್ಷ ಶ್ರೀ ಶಶಿಧರ್‌ರವರು ವಂದನಾರ್ಪಣೆಯನ್ನು ಮಾಡಿ ಸರ್ವಸದಸ್ಯರ ಸಭೆ ನಡೆಯಲು ಸಹಕರಿಸಿದ ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರಿಗೂ, ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ಪದಾಧಿಕಾರಿಗಳಿಗೆ, ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಸಕಲರಿಗೂ ಧನ್ಯವಾದ ಅರ್ಪಿಸಿ ವಂದಿಸಿದರು. ಸಭೆಯ ನಂತರ ಸದಸ್ಯರಿಗೆ ಹಾಗೂ ಕುಟುಂಬದವರಿಗೆ ಭೋಜನವನ್ನೇರ್ಪಡಿಸಲಾಗಿತ್ತು.

ಸಂಘದ ಕಾರ್ಯಕಾರಿ ಸಮಿತಿಗೆ 2021–2024ರ ಅವಧಿಗೆ ಚುನಾವಣೆಯು ಜರುಗಿತು. ಕೆಳಕಂಡ ಸದಸ್ಯರು ಕಾರ್ಯಕಾರಿ ಸಮಿತಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಶ್ರೀಯುತರಾದ ಬಿ. ಸುಬ್ರಹ್ಮಣ್ಯಂ, ಎಚ್.ಕೆ. ಶಶಿಧರ್, ಎಸ್.ಸಿ. ಶ್ರೀನಿವಾಸ, ಅರುಣ್ ವಿ., ಎಸ್. ಸತ್ಯನಾರಾಯಣ, ಟಿ.ಪಿ. ಸೂರ್ಯನಾರಾಯಣ, ಆರ್. ಗಣೇಶ್ ಶ್ರೀಧರ್, ಜಿ.ವೆಂಕಟೇಶ್, ಕೆ. ಗುಂಡಪ್ಪ, ಕೆ.ಬಿ.ಎಸ್. ಶರ್ಮ, ಸರಸ್ವತೀ ನಟರಾಜನ್, ನಾಗೇಶ, ಕೆ.ಮಂಜುನಾರಾಯಣ್, ಕೆ.ಎಸ್. ಅರುಣ್, ಕೆ.ಎಸ್. ಅನಂತ, ಆರ್.ಎ. ಶ್ಯಾಮಸುಂದರ್, ಬಿ.ಎನ್. ಗೋವಿಂದ್ ಪ್ರಸಾದ್, ಆರ್.ಎ. ಶ್ಯಾಮಸುಂದರ್, ಬಿ.ಆರ್. ಅನಿಲ್ ರಮೇಶ್, ಆರ್. ರಮೇಶ್ ಮತ್ತು ಲಲಿತಾ ರಮೇಶ್.



◆ ಲಲಿತಾ ರಮೇಶ್
9945199637

# ಸರ್ವಸದಸ್ಯರ ಸಭೆಯ ಚಿತ್ರಗಳು



ಸ್ವಾಗತ ಸಮಿತಿ ಸದಸ್ಯರು



ಸ್ವಾಗತ – ಉಪಾಧ್ಯಕ್ಷರು



ಪ್ರಾರ್ಥನೆ







ಅಗಲಿದವರಿಗೆ ಮೌನ ಶ್ರದ್ಧಾಂಜಲಿ



ವರದಿ – ಕಾರ್ಯದರ್ಶಿ





ಆಯ–ವ್ಯಯ ಪತ್ರ ಮಂಡನೆ – ಖಜಾಂಚಿ



ಚುನಾವಣಾ ಫಲಿತಾಂಶ









ಹಿತೈಷಿಗಳಿಂದ ಸಲಹೆ – ಸೂಚನೆ



ಅಧ್ಯಕ್ಷರ ನುಡಿ





ಸಭೆಯಲ್ಲಿ ಸದಸ್ಯರು

ಚಿತ್ರಗಳು :
ಎನ್. ಶಿವಕುಮಾರ್

ಚಿತ್ರಗಳು :
ಎನ್. ಶಿವಕುಮಾರ್

# ಸಭೆಯ ನಾನಾ ಮುಖಗಳ ಚಿತ್ರಗಳು

















ಚಿತ್ರಗಳು :
ಎನ್. ಶಿವಕುಮಾರ್

## ಸಂಘಕ್ಕೆ ಸೇವೆ ಸಲ್ಲಿಸಿರುವ ಗಣ್ಯರಿಗೆ ಗೌರವ ಸಮರ್ಪಣೆ










## ಸಂಘದಿಂದ ಸದಸ್ಯರ ವಿಳಾಸ ಕೈಪಿಡಿ ಬಿಡುಗಡೆ...



## ಸಂಘದ ಜಾಲತಾಣ (Website) ಬಿಡುಗಡೆ... www.mmdbs.in





## ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು



ಅರ್ಪಣೆ

ಚಿತ್ರಗಳು : ಎಸ್. ಲಕ್ಷ್ಮೀಶ, ಎನ್. ಶಿವಕುಮಾರ್

# ಸಂಘದ ಪೋಷಕ, ಚಿತ್ರರಂಗದ ದಿಗ್ಗಜ ಎಸ್. ಶಿವರಾಂ ಅವರಿಗೆ ಶ್ರದ್ಧಾಂಜಲಿ
















ರಾಜ್ಯ ಸರ್ಕಾರದಿಂದ ಅಂತಿಮ ಗೌರವ ನಮನ

## ಅರ್ಪಣೆ



**ಬೃ**ಹಚ್ಚರಣ ಸಮುದಾಯದ ಶಿವರಾಂರವರು ದಿನಾಂಕ 28.1.1938ರಂದು ಚೂಡಸಂದ್ರ ಗ್ರಾಮದಲ್ಲಿ ಜನಿಸಿದರು. ತಮ್ಮ ಸಹೋದರ ಶ್ರೀಕಂಠೇಶ್ವರ ಅಯ್ಯರ್ ಅವರೊಂದಿಗೆ ಬೆಂಗಳೂರಿಗೆ ಬಂದು "ವಾಣಿ" ಟೈಪ್ರೈಟಿಂಗ್ ಮತ್ತು ಶೀಘ್ರಲಿಪಿ ಕಲಿಕಾ ಸಂಸ್ಥೆಯನ್ನು ಸ್ಥಾಪಿಸಲು ಸಹಕರಿಸಿದರು.

ಗುಬ್ಬಿ ವೀರಣ್ಣನವರ ರಂಗಭೂಮಿಯ ಪ್ರದರ್ಶನಗಳಿಂದ ಪ್ರಭಾವಿತರಾಗಿ, ಚಲನಚಿತ್ರ ನಿರ್ಮಾಣ ಮತ್ತು ನಟನೆಯ ಕಡೆಗೆ ಒಲವು ಬೆಳೆಸಿಕೊಂಡರು. ಹಲವಾರು ರಂಗ ನಾಟಕಗಳಲ್ಲಿ ನಟಿಸಿ, 1958ರಲ್ಲಿ ಕು. ರಾ. ಸೀತಾರಾಮಶಾಸ್ತ್ರಿ ಅವರಿಗೆ ಸಹಾಯಕರಾಗಿದ್ದರು. ಅಲ್ಲದೆ ಹಿರಿಯ ಛಾಯಾಗ್ರಾಹಕ ಬೋಮನ್ ಡಿ. ಇರಾನಿ ಅವರಲ್ಲಿ ಕ್ಯಾಮರಾ ಸಹಾಯಕರಾಗಿಯೂ ಚಿತ್ರರಂಗದಲ್ಲಿ ಕೆಲಸ ನಿರ್ವಹಿಸಿದರು. ಕಲ್ಯಾಣ ಕುಮಾರ್ ಅಭಿನಯದ ಕು.ರಾ. ಸೀ.ರವರ 'ಬೆರೆತ ಜೀವ' ಚಿತ್ರದಲ್ಲಿ ಪೋಷಕ ಪಾತ್ರದಲ್ಲಿ ನಟಿಸಿದರು, ಶರಪಂಜರ, ನಾಗರಹಾವು, ಶುಭಮಂಗಳ ಮುಂತಾದ ಪುಟ್ಟಣ್ಣ ಕಣಗಾಲರ ಚಿತ್ರಗಳಲ್ಲಿನ ಅವರ ಅಭಿನಯ ಅವಿಸ್ಮರಣೀಯ.

ಶಿವರಾಮ್ ನಟಿಸಿದ ನೂರಾರು ಚಿತ್ರಗಳಲ್ಲಿ 'ಡ್ರೈವರ್ ಹನುಮಂತು' (1980)ನಲ್ಲಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡರು. **"ತಾಯಿ ಸಾಹೇಬ"** ಚಿತ್ರಕ್ಕೆ **ರಾಷ್ಟ್ರೀಯ ಪ್ರಶಸ್ತಿ** ದೊರಕಿದೆ.

ಶಿವರಾಮ್ ಸಹೋದರ ಎಸ್. ರಾಮನಾಥನ್ ಅವರೊಂದಿಗೆ **"ರಾಶಿ ಬ್ರದರ್ಸ್"** ನಿರ್ಮಾಣ ಸಂಸ್ಥೆ ಸ್ಥಾಪಿಸಿ ಗೆಜ್ಜೆ ಪೂಜೆ (1970), ಉಪಾಸನೆ (1974), ನಾನೊಬ್ಬ ಕಳ್ಳ (1979), ಡ್ರೈವರ್ ಹನುಮಂತು (1980), ಬಹು ಚೆನ್ನಾಗಿದೆ (2001) ಚಿತ್ರಗಳ ನಿರ್ಮಾಣ ಮಾಡಿದರು.

ಶಿವರಾಮ್ ಅವರಿಗೆ **"ಡಾ. ಬಿ. ಸರೋಜಾದೇವಿ ರಾಷ್ಟ್ರೀಯ ಪ್ರಶಸ್ತಿ"** ಹಾಗೂ ಕರ್ನಾಟಕ ಸರ್ಕಾರದಿಂದ **"ಡಾ. ರಾಜ್‌ಕುಮಾರ್ ಜೀವಮಾನ ಸಾಧನೆ ಪ್ರಶಸ್ತಿ"** ಸೇರಿದಂತೆ ಅನೇಕ ಗೌರವಗಳು ಸಂದಿದೆ.

ಹಿಂದಿನಿಂದಿಲೂ ಬೃಹಚ್ಚರಣ ಸಂಘದೊಂದಿಗೆ ನಿಕಟ ಸಂಪರ್ಕವಿರುವ ಶಿವರಾಂರವರು ಸಂಘದ ನಾನಾ ಚಟುವಟಿಕೆಗಳಲ್ಲಿ ಭಾಗವಹಿಸಿ ಉತ್ತಮ ಸಲಹೆ ಮತ್ತು ಸೂಚನೆಗಳನ್ನು ಕಾರ್ಯಕಾರಿ ಸಮಿತಿ ಸದಸ್ಯರಿಗೆ ನೀಡುತ್ತಿದ್ದರು.

ದಿನಾಂಕ 28.8.2011ರಂದು ಬೆಂಗಳೂರಿನ ವಿದ್ಯಾಪೀಠದಲ್ಲಿ ನಡೆದ ಸಂಘದ ಸರ್ವಸದಸ್ಯರ ಸಭೆಯಲ್ಲಿ "ಬೃಹಚ್ಚರಣ ವಾರ್ತಾ ಪತ್ರಿಕೆ"ಯನ್ನು ಬಿಡುಗಡೆ ಮಾಡಿದ್ದಲ್ಲದೆ ಸಮುದಾಯದ ಹಿರಿಯ ಚೇತನರನ್ನು ಗೌರವಿಸಿ, ಪ್ರತಿಭಾ ವಿದ್ಯಾರ್ಥಿಗಳನ್ನು ಪುರಸ್ಕರಿಸಿ ಹಾಗೂ ಹಿಂದಿನ ಪದಾಧಿಕಾರಿಗಳನ್ನು ಸನ್ಮಾನಿಸಿದರು, ಅವರು ತಮ್ಮ ಹಿತನುಡಿಯಲ್ಲಿ "ಇಂದು ಸಂಘ ಹಮ್ಮಿಕೊಂಡ ಕಾರ್ಯಕ್ರಮವು ಸುವರ್ಣಾಕ್ಷರದಲ್ಲಿ ಬರೆದಿಡಬೇಕೆಂದು" ತಿಳಿಸಿ ಶುಭ ಹಾರೈಸಿದರು.

ಹಿರಿಯ ಮುತ್ಸದ್ದಿ ಶ್ರೀ ಶಿವರಾಂರವರು ತಮ್ಮ 83 ವರ್ಷಗಳ ತುಂಬು ಜೀವನ ನಡೆಸಿ ಸಜ್ಜನ ಸಹಕಾರಿಯಾಗಿ ಎಲ್ಲರಿಗೂ ಬೇಕಾಗಿದ್ದರು. ಅವರು ಅಯ್ಯಪ್ಪ ಸ್ವಾಮಿ ಭಕ್ತರಿಗೆ "ಗುರುಸ್ವಾಮಿಯಾಗಿ ಮಾರ್ಗದರ್ಶಕರಾಗಿದ್ದರು. ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರಿಂದ ಉದ್ಘಾಟಿಸಲ್ಪಟ್ಟ ಸಾವಿರಾರು ಪುಸ್ತಕಗಳ ಗ್ರಂಥಾಲಯವು ಇವರ ಮನೆಯಲ್ಲಿ ಇದೆ.

ಶಿವರಾಂ ಕನ್ನಡ ಚಲನಚಿತ್ರದ ಹಿರಿಯ ನಿರ್ಮಾಪಕ, ನಿರ್ದೇಶಕ, ಪೋಷಕ ನಟ, ವನ್ಯಜೀವಿ ಛಾಯಾಗ್ರಾಹಕರಾಗಿದ್ದು, ಚಲನಚಿತ್ರ ಕಲಾವಿದರ ಏಳಿಗೆಗಾಗಿ ಸಂಘ ಸ್ಥಾಪಿಸಿ ಅದಕ್ಕಾಗಿಯೇ ತಮ್ಮನ್ನು ಅರ್ಪಿಸಿಕೊಂಡರು, ಸಾಹಿತ್ಯ, ಸಂಗೀತ ಮತ್ತು ಅಧ್ಯಾತ್ಮದಲ್ಲಿ ತೀವ್ರ ಆಸಕ್ತಿ ಹೊಂದಿದ್ದ ಅವರು ತಮ್ಮ ನಾಲ್ಕು ಮಕ್ಕಳು, ಮೊಮ್ಮಕ್ಕಳು ಹಾಗೂ ಸಾವಿರಾರು ಚಲನಚಿತ್ರ ರಂಗದ ಸದಸ್ಯರು ಹಾಗೂ ಬೃಹಚ್ಚರಣ ಸಮುದಾಯದವರನ್ನು ದಿನಾಂಕ 4.12.2021 ರಂದು ಅಗಲಿರುವುದು ವಿಷಾದನೀಯ. ಅವರ ಕುಟುಂಬದ ಸದಸ್ಯರಿಗೆ ದುಃಖ ಭರಿಸುವ ಶಕ್ತಿಯನ್ನು ಭಗವಂತನು ಕೊಡಲೆಂದು ಸಂಘ ಪ್ರಾರ್ಥಿಸುತ್ತದೆ.



◆ **ಕೆ.ಸಿ. ನಟರಾಜನ್**
9845113475

# ನಮ್ಮನ್ನಗಲಿದ ನಮ್ಮವರಿಗೆ ಗೌರವಪೂರ್ವಕ ಶ್ರದ್ಧಾಂಜಲಿ



ಆರ್.ಎಸ್.ವೆಂಕಟಗಿರಿಯಪ್ಪ (99); 10.9.21; ಮಹಾಪೋಷಕ; ಪೋಷಕರಾದ ಶ್ರೀಯುತ ಕರ್ನಲ್ ವಿ.ಜಿ. ರಾಜನ್ ಹಾಗೂ ವಿ.ಎಸ್.ಮಣಿರವರ ತಂದೆ.



ಲಲಿತಮ್ಮ (99); 15.9.21; ಸಮುದಾಯದ ಹಿರಿಯ ದಿವಂಗತ ರಾಜಾಪುರದ ಸತ್ಯನಾರಾಯಣರವರ ಪತ್ನಿ ಹಾಗೂ ಸದಸ್ಯ ಆರ್.ಎಸ್. ಗಜಾನನ ಅವರ ತಾಯಿ.



ಸುನಂದಾ (83); 28.9.21; ಸದಸ್ಯ ಜಗದೀಶ್ ಸುಬ್ಬರಾಮಯ್ಯರವರ ತಾಯಿ.



ಎಸ್.ಎನ್. ಸುಬ್ಬರಾವ್ (93); 27.10.21; ಸಮಾಜಸೇವಾಕರ್ತ, ಸ್ವಾತಂತ್ರ್ಯ ಹೋರಾಟಗಾರ, ದೇಶಭಕ್ತ ದಿ॥ ನಂಜುಂಡಯ್ಯ ಹಾಗೂ ಶಾರದಮ್ಮರವರ ಮಗ.



ಎಸ್. ಅನಂತರಾಮ್ (85); 31.10.21; ಸಮುದಾಯದ ಹಿರಿಯ ದಿವಂಗತ ಇನ್ನಿಕ್ಕಿ ಕೃಷ್ಣಪ್ಪರವರ ಅಳಿಯ ಹಾಗೂ ಸದಸ್ಯರಾದ ನಾಗರತ್ನ, ವೆಂಕಟೇಶ್, ಶೋಭಾ ಮತ್ತು ಮುರಳಿರವರ ತಂದೆ.



ವಿಮಲ ಜಯರಾಮ್; 3.11.21; ಸಮುದಾಯದ ಹಿರಿಯ ದಿವಂಗತ ಜಯರಾಮ್‌ರವರ ಪತ್ನಿ.



ಗೀತಾ (70); 7.11.21; ಹಿರಿಯ ಸದಸ್ಯ ಶ್ರೀ ಎನ್.ವಿ. ಸುಂದರ್ ರವರ ಪತ್ನಿ.



ವೆಂಕಟೇಶ್ ರಾಮು (85); 19.11.21; ಸಮುದಾಯದ ಹಿರಿಯ ದಿವಂಗತ ಎಂ.ಎಲ್. ನಾರಾಯಣ್‌ರವರ ಪುತ್ರ.



ವಿಶ್ವನಾಥ್ (78); ಸಂಘದ ಸದಸ್ಯ ಸಂಜಯ ರಾಜಾಪುರ್ ರವರ ಮಾವ



ಶಾರದಮ್ಮ (91); 21.11.21; ಸದಸ್ಯರಾದ ಶ್ರೀಯುತ ಪ್ರಭಾಕರ್, ವಿಶ್ವನಾಥ್ ಮತ್ತು ಶ್ರೀಮತಿ ಭಾನುಮತಿಯವರ ತಾಯಿ



ಪೋಷಕ ಎಸ್. ಶಿವರಾಮ್ (83); 4.12.21; ಕನ್ನಡ ಚಲನಚಿತ್ರದ ಹಿರಿಯ ನಿರ್ಮಾಪಕ, ನಿರ್ದೇಶಕ, ಪೋಷಕನಟ, ಛಾಯಾಗ್ರಾಹಕ ಮತ್ತು ಚಲನಚಿತ್ರ ಸಂಘಕ್ಕಾಗಿ ಅರ್ಪಿಸಿ ಕೊಂಡವರು, ಸಾಹಿತ್ಯ, ಸಂಗೀತ ಮತ್ತು ಅಧ್ಯಾತ್ಮದಲ್ಲಿ ತೀವ್ರ ಆಸಕ್ತಿ ಹೊಂದಿದ ಹಾಗೂ ಸಂಘದ ಹಿತೈಷಿ.



ಎಂ.ಕೆ. ಶಾರದಮ್ಮ (82); 12.12.21; ಸದಸ್ಯೆ ಬಿ.ಸಿ. ಶುಭಾರವರ ತಾಯಿ ಹಾಗೂ ದಿವಂಗತ ಬಿ.ಎನ್. ಛಾಯಾಪತಿಯವರ ಪತ್ನಿ.

## ಸುದ್ದಿ



ಸ್ನೇಹ ಸಮ್ಮಿಲನ ಫೌಂಡೇಶನ್ನವರು ರೋಟರಿ ಕ್ಲಬ್ ಸಹಯೋಗದೊಂದಿಗೆ 21–11–21 ರಂದು ಉಚಿತ ನೇತ್ರ ತಪಾಸಣಾ, ಶಸ್ತ್ರಚಿಕಿತ್ಸೆ, ಕನ್ನಡಕ ವಿತರಣಾ ಶಿಬಿರವನ್ನು ಸಂಘದ ಸದಸ್ಯ ಹೆಚ್.ಜಿ. ಅನಂತ ಮತ್ತು ಗೆಳೆಯರು ಏರ್ಪಡಿಸಿದ್ದರು.

## ಅನಿಸಿಕೆ

ಸದಸ್ಯರ ಕೈಪಿಡಿಯ ಬಗ್ಗೆ ಶ್ರೀಯುತರಾದ ಎಸ್. ಚಂಪಕಧಾಮ, ಹೆಚ್.ಡಿ. ಗಣೇಶ್, ಡಿ.ಎಸ್. ಗೋವಿಂದರಾಜು, ಆರ್.ಎಸ್. ಮಹೇಶ್ ಮುಂತಾದವರು ಶ್ಲಾಘಿಸಿದ್ದಾರೆ.



# ಜೀವನ ಸಂಗಾತಿ

* ನಿಮ್ಮ ಜೀವನ ಸಂಗಾತಿ ಯಾರು?

* ಅಮ್ಮ, * ಅಪ್ಪ, * ಹೆಂಡತಿ, * ಮಗ, * ಗಂಡ, * ಮಗಳು, * ಗೆಳೆಯ, * ಗೆಳತಿ, * ಖಂಡಿತವಾಗಿಯೂ ಅಲ್ಲ.

ನಿಮ್ಮ ಜೀವನದ ಸಂಗಾತಿ ಎಂದರೆ, ವಾಸ್ತವ್ಯದಲ್ಲಿ ಅದು ನಿಮ್ಮ ಶರೀರವೇ ಆಗಿರುತ್ತದೆ. ಒಮ್ಮೆ ನಿಮ್ಮ ಶರೀರವು ನಿಮಗೆ ಸ್ಪಂದಿಸುವುದನ್ನು (ನಿಮಗೆ ಉತ್ತರಿಸುವುದನ್ನು) ನಿಲ್ಲಿಸಿದಲ್ಲಿ, ನಿಮ್ಮ ಸಂಗಡ ಯಾರೂ ಇರುವುದಿಲ್ಲ.

ನೀವು ಮತ್ತು ನಿಮ್ಮ ಶರೀರ, ಜನ್ಮ ದಿನದಿಂದ ಮೊದಲ್ಗೊಂಡು ಮರಣದ ತನಕ, ಒಟ್ಟಿಗೇ ಇರುತ್ತೀರಿ. ನೀವು ಎಷ್ಟು ಹೆಚ್ಚು ಪ್ರಮಾಣದಲ್ಲಿ ಇದರ ಕಾಳಜಿ ವಹಿಸುತ್ತೀರೋ, ಅದೇ ಪ್ರಮಾಣದಲ್ಲಿ ಅದು ನಿಮಗೆ ಸಹಕಾರ ನೀಡುತ್ತದೆ.

ನೀವು ಏನು ತಿನ್ನುತ್ತೀರಿ? ಸರಿಯಾಗಿರಲು ನೀವು ಏನೆಲ್ಲವನ್ನು ಮಾಡುತ್ತೀರಿ? ನೀವು ಮಾನಸಿಕ ಉದ್ವೇಗವನ್ನು ಹೇಗೆ ಶಮನ ಮಾಡುತ್ತೀರಿ? ನೀವು ಎಷ್ಟು ವಿಶ್ರಾಂತಿ ಪಡೆಯುತ್ತೀರಿ?

ನಿಮ್ಮ ದೇಹವು ಅದೇ ತರಹ ಸ್ಪಂದಿಸುತ್ತದೆ.

ನೀವು ಇರುವ ಶರೀರವೇ ನಿಮ್ಮ ಏಕೈಕ ಶಾಶ್ವತ ವಿಳಾಸವಾಗಿರುತ್ತದೆ ಎಂಬುದನ್ನು ನೆನಪಿಡಿ. ನಿಮ್ಮ ಶರೀರವು ನಿಮ್ಮ ಆಸ್ತಿಯಾಗಿರುತ್ತದೆ, ಹಾಗೂ ಅದರ ಮೇಲೆ ಯಾರೂ ಹಕ್ಕು ಸಾಧಿಸಲಾಗದು.

ನಿಮ್ಮ ಶರೀರದ ಹೊಣೆಗಾರಿಕೆ ನಿಮ್ಮದೇ ಆಗಿರುತ್ತದೆ. ಆದ್ದರಿಂದ, ನೀವೇ ಅದರ ನಿಜವಾದ ಜೀವನ ಸಂಗಾತಿಯಾಗಿರುತ್ತೀರಿ. ಸದಾ ಆರೋಗ್ಯದಿಂದಿರಿ, ಹಾಗೂ ನಿಮ್ಮ ಬಗ್ಗೆ ಗಮನ ಇಡಿ.

ಹಣ ಬರುತ್ತದೆ, ಅಂತೆಯೇ ಹೋಗುತ್ತದೆ. ಹಾಗೇನೇ ಸಂಬಂಧಿಕರೂ ಸಹ! ಯಾವುದೂ ಶಾಶ್ವತವಲ್ಲ. ಬರುತ್ತವೆ, ಹಾಗೆಯೇ ಹೋಗುತ್ತವೆ. ನೆನಪಿಡಿ. ನಿಮ್ಮ ಹೊರತಾಗಿ, ಇನ್ನು ಯಾರೂ ಸಹ ನಿಮ್ಮ ಶರೀರಕ್ಕೆ ಸಹಾಯ ಮಾಡಲು ಸಾಧ್ಯವಿಲ್ಲ.

**ನೀವು ಪ್ರತಿ ದಿನ ಮಾಡಿ**

ಪ್ರಾಣಾಯಾಮ – ಶ್ವಾಸಕೋಶಗಳಿಗಾಗಿ.

ಧ್ಯಾನ – ಮನಶಾಂತಿಗಾಗಿ.

ಯೋಗ ಆಸನ – ಶರೀರಕ್ಕಾಗಿ.

ನಡಿಗೆ – ಹೃದಯದ ಸಲುವಾಗಿ

ಉತ್ತಮ ಊಟ– ಬೆಳವಣಿಗೆಗಾಗಿ.

ಉತ್ತಮ ವಿಚಾರ– ಆತ್ಮಕ್ಕಾಗಿ

ಉತ್ತಮ ಕಾರ್ಯ – ವಿಶ್ವಕ್ಕಾಗಿ

ಆದ್ದರಿಂದ, ಆರೋಗ್ಯದಿಂದಿರಿ, ಗಟ್ಟಿಮುಟ್ಟಾಗಿರಿ, ಹಾಗೂ ಪ್ರಸನ್ನಚಿತ್ತದಿಂದಿರಿ.



◆ **ಸಂಧ್ಯಾ ನಾಗರಾಜ್**
9980224796

ಪುಸ್ತಕ ಬಿಡುಗಡೆ

## ಜಕ್ಕೂರು ಶಾಮಣ್ಣ






ಸದಸ್ಯ ಶ್ರೀ ವಿ. ಸುನೀಲ್ ರವರ ತಾತನವರಾದ ದಿವಂಗತ ಶ್ರೀ ಜೆ.ವಿ. ವೆಂಕಟಗಿರಿಯಪ್ಪನವರು ರಚಿಸಿ ರಾಗಗಳನ್ನು ಅಳವಡಿಸಿದ "ಆನಂದ ಗೀತಾವಳಿ" ಎಂಬ ಪುಸ್ತಕವನ್ನು ಅವರ ಬಂಧುಗಳು ಪ್ರಕಟಿಸಿದ್ದಾರೆ. ಅವರು ಸಂಗೀತ ಪ್ರಿಯರಿಗೆಲ್ಲಾ "ಹಾರ್ಮೋನಿಯಂ ಶಾಮಣ್ಣ" ಎಂದು ಹೆಸರುವಾಸಿಯಾಗಿದ್ದು, ಕರ್ನಾಟಕ ಮತ್ತು ಹಿಂದೂಸ್ಥಾನಿ ಸಂಗೀತದಲ್ಲಿ ಪ್ರಭುತ್ವ ಪಡೆದು "ಆನಂದ ಗೀತಾವಳಿ" ಪುಸ್ತಕದಲ್ಲಿ ಪ್ರಯೋಗಿಸಿರುವುದು ಅಸಾಮಾನ್ಯ ಸಾಧನೆ. ಮುನ್ನುಡಿಯಲ್ಲಿ ತಮ್ಮನ್ನು ಪಾಮರ, ಅಲ್ಪಮತಿ ಮತ್ತು ಬಾಲಭಾಷೆ ಎಂದೆಲ್ಲಾ ತಿಳಿಸಿರುವುದು ಅವರ ವಿನಮ್ರತೆಗೆ ಸಾಕ್ಷಿ. ದೇವಾನುದೇವತೆಗಳ ಕುರಿತಂತಾದ ಸ್ತುತಿಗಳಲ್ಲಿ ಭಕ್ತಿ, ಸಂಪೂರ್ಣ ಶರಣಾಗತಿ ಗಳಿವೆ. ಸಂಪ್ರದಾಯ ಗೀತೆಗಳನ್ನೂ ರಚಿಸಿದ್ದಾರೆ. ಈ ಗೀತೆಗಳನ್ನು ಭಕ್ತಿ, ಶ್ರದ್ಧೆಯಿಂದ ಕಲಿತು ಅವರ ಕುಟುಂಬ ವರ್ಗದವರು ಹಾಡುತ್ತಿದ್ದಾರೆ.

ಇಂತಹ ಹಿರಿಯ ಮೇಧಾವಿ ಜೆ.ವಿ. ವೆಂಕಟಗಿರಿಯಪ್ಪನವರು ನಮ್ಮ ಸಮುದಾಯದವರು ಎಂದು ಹೇಳಿಕೊಳ್ಳಲು ನಮಗೆ ಹೆಮ್ಮೆ ಎನಿಸುತ್ತದೆ.

**–ಸಂ.**

### <u>ವಿವಾಹ</u>

ಸಂಘದ ಸದಸ್ಯ ಶ್ರೀ ಎಸ್. ಶ್ರೀನಿವಾಸನ್ (ವಾಸು) ಹಾಗೂ ಶ್ರೀಮತಿ ಲತಾರವರ ಪುತ್ರಿ **ಚಿ॥ ಸೌ॥ ಮಯೂರಿ** ಅವರು, ಶ್ರೀಮತಿ ಮತ್ತು ಶ್ರೀ ರಾಜೇಂದ್ರ ಪ್ರಸಾದ್‌ರವರ ಪುತ್ರ **ಚಿ॥ ವಿಶಾಖ್ ಮರುವಳರವರನ್ನು ದಿನಾಂಕ 24–12–2021** ರಂದು ವರಿಸಿರುತ್ತಾರೆ.

**ಸಂಘವು ನೂತನ ವಧು–ವರರಿಗೆ ಶುಭ ಹಾರೈಸುತ್ತದೆ**

# ಶಿವಮಾನಸ ಪೂಜಾ

ಆದಿಗುರು ಶ್ರೀ ಶಂಕರ ಭಗವತ್ಪಾದ ವಿರಚಿತ "ರತ್ನೈಃ..." ಎಂದು ಪ್ರಾರಂಭವಾಗುವ ಪ್ರಖ್ಯಾತ **"ಶಿವಮಾನಸ ಪೂಜಾ"** ಎಂಬ ಪಂಚಕವು ಅಧ್ಯಾತ್ಮ ಸಾಧಕರಿಗೆ ಮತ್ತು ಉಪಾಸನೆ ಮಾಡಲು ಇಚ್ಛಿಸುವವರಿಗೆ ಅತ್ಯುತ್ತಮ ಸಾಧನಾ ಮಾರ್ಗವಾಗಿದೆ.

**"ಶಿವ"** ಎಂದರೆ ಶುಭ, ಮಂಗಳ, ಕಲ್ಯಾಣ, ಕ್ಷೇಮ ಮತ್ತು ಇನ್ನೂ ಮುಂತಾದ ಅರ್ಥಗಳಿವೆ. **"ಮಾನಸ ಪೂಜಾ"** ಎಂದರೆ ಮನಸ್ಸಿನಲ್ಲಿ ಸತ್ಸಂಕಲ್ಪದಿಂದ ಮಾಡುವ ಸಗುಣೋಪಾಸನೆ. ಭಕ್ತರಿಗೆ ಅನಿವಾರ್ಯವಾಗಿ ಶರೀರವು ಪ್ರತಿಕೂಲವಾಗಿದ್ದಾಗ, ಪೂಜೆಯನ್ನು ಮಾಡಲು ಅನುಕೂಲವಿಲ್ಲದಿದ್ದಾಗ ಶಿವಮಾನಸ ಪೂಜೆಯ ಕ್ರಮವನ್ನು ಮನಸ್ಸಿನಲ್ಲೇ ಮಾಡಬಹುದೆಂದು ಜಗದ್ಗುರುಗಳು ತಿಳಿಸುತ್ತಿದ್ದಾರೆ.

ಮೊದಲನೆಯ ಶ್ಲೋಕದಲ್ಲಿ ರತ್ನಕಲ್ಪಿತ ಆಸನ, ಗಂಗಾ ಜಲದಿಂದ ಅಭಿಷೇಕ, ಶ್ರೇಷ್ಠವಾದ ವಸ್ತ್ರ ಧಾರಣೆ, ನಾನಾ ರತ್ನಗಳಿಂದ ಕೂಡಿದ ಹಾರ, ಕೇಯೂರ, ಆಭರಣಗಳು, ಸುವಾಸನಾಯುಕ್ತ ಕಸ್ತೂರಿ, ಚಂದನ, ಶ್ರೇಷ್ಠ ಸಂಪಿಗೆ, ಬಿಲ್ವಪತ್ರಗಳ ಪುಷ್ಪಮಾಲೆಗಳು, ಧೂಪ ಮತ್ತು ದೀಪಗಳನ್ನು ಸ್ವೀಕರಿಸು ಎಂದು ಮನಸ್ಸಿನಲ್ಲಿ ಕಲ್ಪಿಸಿಕೊಂಡು ಪೂಜಿಸುವುದು. ಅಂದರೆ ಮನುಷ್ಯರು ಭಗವಂತನಿಂದ ಸೃಷ್ಟಿಯಾದ ಪ್ರಕೃತಿಯ ಶ್ರೇಷ್ಠವಾದ ವಸ್ತುಗಳಿಂದ **"ಕೆರೆಯ ನೀರನು ಕೆರೆಗೆ ಚೆಲ್ಲಿ"** ಎಂಬ ಪುರಂದರದಾಸರ ನುಡಿಯಂತೆ ಮತ್ತೆ ಅವನಿಗೇ ಸಮರ್ಪಿಸಬೇಕು.

ಎರಡನೆಯ ಶ್ಲೋಕದಲ್ಲಿ ನಾವು ಭಕ್ತಿಪೂರ್ವಕವಾಗಿ, ಧರ್ಮಯುತವಾಗಿ ಸಂಪಾದಿಸಿದ ಅರ್ಥದಿಂದ ಸುವರ್ಣ ಮತ್ತು ನವರತ್ನ ಪಾತ್ರೆಯಲ್ಲಿರುವ ನೀರು, ಹಾಲು, ಮೊಸರು, ತುಪ್ಪ ಮತ್ತು ಬಾಳೆಹಣ್ಣು ಹಾಗೂ ತಯಾರಿಸಿದ ಪಂಚಭಕ್ಷ್ಯ, ಪಾನಕ, ನೈವೇದ್ಯ ಮತ್ತು ತಾಂಬೂಲವನ್ನು ಸ್ವೀಕರಿಸಿ ಪ್ರಭು ಎಂದು ಪ್ರಾರ್ಥಿಸುವುದು. ಮನುಜನು ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಭೂತಾಯಿಯಿಂದ ದೊರಕುವ ಲೋಹ, ಘನ, ದ್ರವ ರೂಪದಲ್ಲಿರುವ ವಸ್ತುಗಳಿಂದ ಮತ್ತು ಅವುಗಳಿಂದ ತಯಾರಿಸಿದ ಭಕ್ಷ್ಯ-ಭೋಜ್ಯಗಳನ್ನು ಪ್ರಭುವಿಗೆ ಮಾನಸಿಕ ವಾಗಿ ಅರ್ಪಿಸಿ ಶರಣಾಗತಿಯನ್ನು ವ್ಯಕ್ತಪಡಿಸುವುದು.

ಮೂರನೆಯ ಶ್ಲೋಕದಲ್ಲಿ ಪೂಜೆಯ ನಂತರ ಮಾಡುವ ಛತ್ರ, ಚಾಮರ, ಬೀಸಣಿಗೆ, ಕನ್ನಡಿ, ವೀಣೆ, ಭೇರಿ, ಮೃದಂಗ, ದುಂದುಭಿಗಳ ವಾದ್ಯ ಸಂಗೀತ, ನೃತ್ಯ, ಸಾಷ್ಟಾಂಗ ನಮಸ್ಕಾರ ಮತ್ತು ಅನೇಕ ವಿಧವಾದ ಸ್ತುತಿಗಳನ್ನು ಶ್ರದ್ಧೆ ಮತ್ತು ಭಕ್ತಿಯಿಂದ ಸಮರ್ಪಿಸಿದ್ದೇನೆ ಎಂದು ಕೇಳಿಕೊಳ್ಳುವುದು. ಇದನ್ನು ವೇದಾಂತದ ಭಾಷೆಯಲ್ಲಿ ಅರ್ಥೈಸುವುದಾದರೆ **"ಸರ್ವಂ ಖಲ್ವಿದಂ ಬ್ರಹ್ಮ"** ಅಂದರೆ ಪ್ರತಿಯೊಂದು ಚರಾಚರ ವಸ್ತುಗಳಲ್ಲಿ ಆ ಪರಬ್ರಹ್ಮವೇ ಓತಪ್ರೋತವಾಗಿ ವ್ಯಾಪಿಸಿದೆಂದು ಮನಸ್ಸಿನಲ್ಲಿ ಅಭೇದ ಜ್ಞಾನವನ್ನು ದೃಢಪಡಿಸಿಕೊಳ್ಳಬೇಕು.

ನಾಲ್ಕನೆಯ ಶ್ಲೋಕದಲ್ಲಿ ಎಲ್ಲವೂ ನೀನೆ ಅಂದರೆ ಶಿವನೇ ಆತ್ಮನು, ಬುದ್ಧಿಯೇ ಗಿರಿಜಾ, ನನ್ನ ಪಂಚಪ್ರಾಣಗಳು ನಿನ್ನ ಅನುಚರರು, ಈ ಶರೀರವೇ ನಿನ್ನ ಮನೆ, ನಾನು ಅನುಭವಿಸುವ ವಿಷಯ ಭೋಗಗಳು ನಿನ್ನ ಪೂಜೆ, ನನ್ನ ನಿದ್ರೆಯು ನಿನ್ನ ಸಮಾಧಿ ಸ್ಥಿತಿ, ನಾನು ನಡೆಯುವುದು ನಿನ್ನ ಪ್ರದಕ್ಷಿಣೆ, ನನ್ನ ಎಲ್ಲಾ ಮಾತುಗಳು ನಿನ್ನ ಸ್ತೋತ್ರಗಳು ಮತ್ತು ನಾನು ಯಾವ ಯಾವ ಕರ್ಮಗಳನ್ನು ಮಾಡುತ್ತೇನೋ ಅದೆಲ್ಲಾ ನಿನ್ನ ಆರಾಧನೆಯಾಗಲಿ ಎಂದು ಮನಃಪೂರ್ವಕ ವಾಗಿ ಸಂಪೂರ್ಣ ಶರಣಾಗತಿ ಅಂದರೆ ನಾನು ನಿಮಿತ್ತ ಎಂಬ ಭಾವದಿಂದ ಪೂಜಿಸುವುದು.

ಐದನೆಯ ಶ್ಲೋಕದಲ್ಲಿ "ಶ್ರೀಮದ್ಭಗವದ್ಗೀತೆ" 18ನೆಯ ಅಧ್ಯಾಯದ 48ನೇ ಶ್ಲೋಕ **ಸಹಜಂ ಕರ್ಮ ಕೌಂತೇಯ ಸದೋಷಮಪಿ ನ ತ್ಯಜೇತ್ । ಸರ್ವಾರಂಭಾ ಹಿ ದೋಷೇಣ ಧೂಮೇನಾಗ್ನಿರಿವಾವೃತಾಃ**ದಲ್ಲಿ ತಿಳಿಸಿರುವಂತೆ ಕರುಣಾ ಸಾಗರನಾದ ಮಹಾದೇವನನ್ನು ನಾನು ಮಾಡಿದ ಕಾಯ, ವಾಚಾ ಮತ್ತು ಮಾನಸ ಅಪರಾಧವನ್ನು ಮತ್ತು ಮಾಡ ಬೇಕಾಗಿದ್ದು ಅಥವಾ ಮಾಡಬಾರದ್ದು ಯಾವುದೇ ಆಗಿರಲಿ ಅದನ್ನು ಕ್ಷಮಿಸಿ ಕೃಪೆ ತೋರು ಎಂದು ಕಳಕಳಿಯಿಂದ ಮನಃಪೂರ್ವಕವಾಗಿ ಪ್ರಾರ್ಥಿಸುವುದು.

ಮೊದಲನೆಯ ಮೂರು ಶ್ಲೋಕಗಳಲ್ಲಿ ಪೂರ್ವ ಮೀಮಾಂಸೆ (ವೇದದ ಕರ್ಮಕಾಂಡ)ಯಲ್ಲಿರುವ ಶಾಸ್ತ್ರೋಕ್ತವಾದ ಷೋಡಶೋಪಚಾರ ವಿಧಾನಗಳನ್ನು ಅನುಸರಿಸಿ ಪೂಜಿಸುವುದನ್ನು ಹೇಳಲಾಗಿದೆ. ನಾಲ್ಕನೆಯ ಶ್ಲೋಕದಲ್ಲಿ ಉತ್ತರಮೀಮಾಂಸೆ (ವೇದದ ಜ್ಞಾನಕಾಂಡ ವಾದ ಉಪನಿಷತ್)ಯಲ್ಲಿರುವ ಉಪಾಸನೆ ಭಾವದಿಂದ ಆರಾಧಿಸುವುದು. ಐದನೆಯ ಶ್ಲೋಕದಲ್ಲಿ ಕಾಯ, ವಾಚಾ ಮತ್ತು ಮಾನಸಾ ವಿಧಿಗಳಲ್ಲಿ ಮಾಡಿರುವ ಅಪರಾಧಗಳನ್ನು ಕ್ಷಮಿಸು ಎಂದು ಆರ್ದ್ರಯುತವಾಗಿ ಕೇಳಿಕೊಳ್ಳುವುದು.

ಶ್ರೀ ಶಂಕರ ಭಗವತ್ಪಾದರು ಜೀವಾತ್ಮ-ಪರಮಾತ್ಮ ಐಕ್ಯತೆಯನ್ನು ಅನುಸಂಧಾನ ಮಾಡುವ ಸುಲಭ ಮಾರ್ಗ ವಾದ ಈ ಶಿವ ಮಾನಸ ಪೂಜೆಯನ್ನು ನಮಗಾಗಿ ಗುರು ಕಾರುಣ್ಯದಿಂದ ಅನುಗ್ರಹಿಸಿದ್ದಾರೆ.

◆ **ಲಲಿತಾ ರಮೇಶ್**
9945199637

ಜ್ಯೋತಿರ್ಲಿಂಗಗಳ ದರ್ಶನ

# ಸೋಮನಾಥ ದೇವಾಲಯ



**ಭಾ**ರತದ ವಿವಿಧ ಭಾಗಗಳಲ್ಲಿ ಜ್ಯೋತಿರ್ಲಿಂಗಗಳು ಹರಡಿಕೊಂಡಿವೆ. ಈ ಹನ್ನೆರಡು ಜ್ಯೋತಿರ್ಲಿಂಗಗಳ ಯಾತ್ರೆ ಹೇಗೆ ಎಂದು ತಿಳಿಯೋಣ.

**ಸೌರಾಷ್ಟ್ರೇ ಸೋಮನಾಥಂ ಚ । ಶ್ರೀಶೈಲೇ ಮಲ್ಲಿಕಾರ್ಜುನಂ ।**
**ಉಜ್ಜಯನ್ಯಂ ಮಹಾಬಲಂ । ಓಂಕಾರೇ ಮಮಲೇಶ್ವರ ।**
**ಪರಾಲ್ಯಾಂ ವೈದ್ಯನಾಥಂ ಚ । ಡಾಕಿಣ್ಯಾಂ ಭೀಮಶಂಕರಂ ।**
**ಸೇತುಬಂಧೇ ತು ರಾಮೇಶಂ । ನಾಗೇಶಂ ಧಾರುಕಾವನೇ ।**
**ವಾರಣಸ್ಯಾಂತು ವಿಶ್ವೇಶಂ । ತ್ರ್ಯಂಬಕಂ ಗೌತಮೀತಟೇ ।**
**ಹಿಮಾಲಯೇ ತು ಕೇದಾರಂ । ಘುಷ್ಮೇಶ್ವರಂ ಚ ಶಿವಾಲಯೇ ॥**
**ಏತಾನಿ ಜ್ಯೋತಿರ್ಲಿಂಗಾನಿ ಸಾಯಂ ಪ್ರಾತಃ ಪಠೇನ್ನರಃ**
**ಸಪ್ತ ಜನ್ಮ ಕೃತಂ ಪಾಪಂ ಸ್ಮರಣೇನ ವಿನಶ್ಯತಿ ॥**

ಮೇಲೆ ಹೇಳಿದ ಶ್ಲೋಕವು ಸುಪ್ರಸಿದ್ಧ “ರುದ್ರಸಂಹಿತೆ”ಯಲ್ಲಿದೆ.

**ಸೌರಾಷ್ಟ್ರದ ಸೋಮನಾಥ ಎಲ್ಲಿದೆ?**

ಗುಜರಾತಿನ ಕಾಥೇವಾಡ ಜಿಲ್ಲೆಯ ದಕ್ಷಿಣ ತುದಿಯಲ್ಲಿದೆ. ಸಮುದ್ರ ತೀರದಲ್ಲಿರುವ ಇದನ್ನು ಪ್ರಾಚೀನ ತ್ರಿವೇಣಿ ಕ್ಷೇತ್ರ ಎಂದೂ ಕರೆಯಲಾಗುತ್ತದೆ. ಸರಸ್ವತಿ, ಹಿರಣ್ಯ ಮತ್ತು ಕಪಿಲ ನದಿಗಳು ಇಲ್ಲಿ ಸಂಗಮವಾಗುವುವು. ಚಂದ್ರನು ಇಲ್ಲಿ ತಪಸ್ಸು ಮಾಡಿದ್ದನಂತೆ. ಈ ಪೌರಾಣಿಕ ನಂಬಿಕೆ ಅನುಸರಿಸಿ **‘ಸೋಮನಾಥ’** ಎಂಬ ಹೆಸರು ಬಂದಿದೆ. ಅರ್ಜುನ ತನ್ನ ತೀರ್ಥಯಾತ್ರೆಯನ್ನು ಇಲ್ಲಿಂದಲೇ ಆರಂಭಿಸಿದ್ದಂತೆ. ಈ ಕ್ಷೇತ್ರದ ಕುರಿತು ಅನೇಕ ಪೌರಾಣಿಕ ನಂಬಿಕೆಗಳಿವೆ.

**ಭೇಟಿ ನೀಡುವ ಸಮಯ :** ಸೋಮನಾಥದಲ್ಲಿನ ಕಾಲಭೈರವೇಶ್ವರ ರಥೋತ್ಸವ ಶಿವರಾತ್ರಿಯಂದು ನಡೆಯುತ್ತದೆ. ಇದಲ್ಲದೆ ಜುಲೈ ಮತ್ತು ಡಿಸೆಂಬರ್ ತಿಂಗಳಲ್ಲಿ ವಿಶೇಷ ರಥೋತ್ಸವಗಳನ್ನು ಹಮ್ಮಿಕೊಳ್ಳಲಾಗುತ್ತವೆ. ಭೇಟಿ ನೀಡುವ ನಿರ್ದಿಷ್ಟ ದಿನ ನಿಗದಿಯಾಗಿರದಿದ್ದರೂ, ಫೆಬ್ರವರಿ, ಮಾರ್ಚ್ ತಿಂಗಳು ಉತ್ತಮ.

**ಹೇಗೆ ಹೋಗುವುದು? :** ಬೆಂಗಳೂರು – ಅಹಮದಾಬಾದ್ ರೈಲು ಅಥವಾ ವಿಮಾನ ಮೂಲಕ ಪ್ರಯಾಣ. ಅಲ್ಲಿಂದ 406ಕಿ.ಮೀ. ದೂರದಲ್ಲಿರುವ ವೇರಾವಲ್ ರೈಲು ನಿಲ್ದಾಣಕ್ಕೆ ಪ್ರಯಾಣ. ವೇರಾವಲ್‌ನಿಂದ, ಸೋಮನಾಥ 20ಕಿ.ಮೀ. ದೂರದಲ್ಲಿದೆ. ಸಾಕಷ್ಟು ಸರ್ಕಾರಿ ಹಾಗೂ ಖಾಸಗಿ ವಾಹನಗಳ ವ್ಯವಸ್ಥೆಯೂ ಇದೆ. ಇತ್ತೀಚಿನ ವರ್ಷಗಳಲ್ಲಿ ಪೂರ್ವಯೋಜಿತ ಪ್ರಯಾಣಕ್ಕೂ ಸೌಕರ್ಯಗಳಿವೆ.

**ವಸತಿ :** ಸೋಮನಾಥ ದೇವಸ್ಥಾನಕ್ಕೆ ಸೇರಿದ ಅತಿಥಿ ಗೃಹಗಳಿವೆ. ದ್ವಾರಕಾ ಪೀಠದ **ಶಾರದಾ ವಿಶ್ರಾಂತಿ ಗೃಹ**ವಿದೆ. ಇದಲ್ಲದೆ, ಕೆಲವು ಖಾಸಗಿ ಹೋಟೆಲ್‌ಗಳು ಕೂಡ ಲಭ್ಯ.

ಮುಂದಿನ ಸಂಚಿಕೆಯಲ್ಲಿ ಶ್ರೀಶೈಲ ಮಲ್ಲಿಕಾರ್ಜುನನ ದರ್ಶನಕ್ಕೆ ಕಾಯೋಣ

◆ **ಅನಿಲ್ ರಮೇಶ್**
9980027189

## ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಸಂಘದಿಂದ ನೂರು ಕುರ್ಚಿಗಳ ಕೊಡುಗೆ

ಶ್ರೀಯುತರು

**ನರೇಂದ್ರ ವಿ.**
**ಅಟ್ಟೂರು ರಾಮಕೃಷ್ಣ ಶರ್ಮ**
**ಶ್ರೀನಿವಾಸಮೂರ್ತಿ ಸಿ.ಎಸ್.**
**ಶ್ರೀಧರಮೂರ್ತಿ ಬಿ.ಪಿ.**
**ಶ್ರೀಧರ್ ಬಿ.**
**ನಾಗರಾಜು ಕೆ.ಟಿ.**
**ಸೋಮಸುಂದರ ಎಸ್.**
**ಶ್ರೀನಿವಾಸ ಎಸ್.ಸಿ.**
**ಶರ್ಮಾ ಕೆ.ಬಿ.ಎಸ್.**
**ಅರುಣ್ ವಿ.**
**ಸೂರ್ಯಪ್ರಕಾಶ್ ಬಿ.ಎ.**
**ಸತ್ಯಮೂರ್ತಿ ಎಸ್.ಎ.**
**ಕೆ. ಗುಂಡಪ್ಪ**
**ವೆಂಕಟೇಶ ಪ್ರಸಾದ್ ಆರ್.**
**ಗಣೇಶ ಶ್ರೀಧರ್**
**ಶ್ಯಾಮಸುಂದರ್ ಆರ್.ಎ.**
**ಅರುಣ್ ಕೆ.ಎಸ್.**
**ಸತ್ಯನಾರಾಯಣ ಎಸ್.**
**ಮಣಿ ವಿ.ಎಸ್.**
**ಸುಬ್ರಮಣ್ಯಂ ಬಿ.**
**ಗೋವಿಂದ ಪ್ರಸಾದ್ ಬಿ.ಎನ್.**
**ರಮೇಶ್ ಆರ್.**
**ಶಶಿಧರ್ ಎಚ್.ಕೆ.**
**ಸಂಧ್ಯಾ ನಾಗರಾಜ್**
**ನಾಗೇಶ**
**ತಾರಾ ರವೀಂದ್ರ ಮತ್ತು ಸಹೋದರಿಯರು**
**ವೆಂಕಟೇಶ್ ಆರ್.ಎಸ್.**
**ಬಾಲಸುಬ್ರಮಣ್ಯ ಜಿ.ವಿ**
**ಶೇಷಾದ್ರಿ ಬಿ.ವಿ.**
**ಶಂಕರ ಪ್ರಸಾದ್ ಬಿ.ಆರ್.**
**ನಿತಿನ್ ಭಾಸ್ಕರ್**
**ಈಶ್ವರನ್ ಎ.**
**ಚಕ್ರಪಾಣಿ**
**ನೇತ್ರಾನಂದ ಟಿ.ಆರ್.**
**ಮನೋಜ್ ಎಸ್.**
**ಸರಸ್ವತಿ ನಟರಾಜನ್**
**ಶುಭ ಗಾಯತ್ರಿ**
**ಶಿವಕುಮಾರ್ ಎನ್.**
**ಸತೀಶ್ ವಿ.**
**ಸೂರ್ಯನಾರಾಯಣ ಟಿ.ಪಿ.**
**ಅನಂತ ಕೆ.ಎಸ್.**
**ಸೂರ್ಯಪ್ರಕಾಶ್ ಎನ್.ವಿ.**
**ಸುರೇಶ್ ಕೆ.ಬಿ.**
**ನರಸು ರಾಮಚಂದ್ರ**
**ಮಂಜುನಾರಾಯಣ ಕೆ.**
**ಕೃಷ್ಣನ್ ಟಿ.ಎನ್.**
**ಜಗನ್ನಾಥ್ ಟಿ.ಪಿ.**
**ನಾಗರಾಜ್ ಎಚ್.ಎಸ್.**

**ರೇಖಾ ಚಿತ್ರಗಳು** **ಲಲಿತಾ ಎಚ್. ಆರ್.**







## ವಿವಾಹ

ಸಂಘದ ಸದಸ್ಯ ಶ್ರೀ ಬಿ.ಎಸ್. ಶ್ರೀನಿವಾಸ್ ಮತ್ತು ಶ್ರೀಮತಿ ಪದ್ಮಪ್ರಭ ಶ್ರೀನಿವಾಸ್‌ರವರ ಪುತ್ರ **ಚಿ॥ ಬಿ.ಎಸ್. ಸೂರಜ್ ಕಶ್ಯಪ್**‌ರವರ ವಿವಾಹವು ಶ್ರೀಮತಿ ಲಕ್ಷ್ಮೀ ಶ್ರೀಕೇಶವ ಮತ್ತು ಶ್ರೀ ಕೆ.ವಿ. ಶ್ರೀಕೇಶವ ರವರ ಪುತ್ರಿ **ಚಿ॥ ವರ್ಷ ಶ್ರೀಕೇಶವ** ರವರ ಜೊತೆ **13–12–2021**ರಂದು ಬೆಂಗಳೂರಲ್ಲಿ ನಡೆಯಿತು.

**ಸಂಘವು ನೂತನ ವಧು–ವರರಿಗೆ ಶುಭ ಹಾರೈಸುತ್ತದೆ**

## ಅಭಿನಂದನೆಗಳು

ಸಂಘದ ಸದಸ್ಯ ವಿದ್ವಾನ್ **ಶ್ರೀ ಆರ್. ಕಾರ್ತಿಕ್** (ಸಂಘದ ಸದಸ್ಯ ಶ್ರೀ ಆರ್.ಎಸ್. ರವಿಕುಮಾರ್ ಹಾಗೂ ಶ್ರೀಮತಿ ವಸುಮತಿರವರ ಪುತ್ರ) ಕೇಂದ್ರ ಸರ್ಕಾರದ ಪ್ರಸಾರ ಭಾರತಿ (ಆಕಾಶವಾಣಿ)ಯಲ್ಲಿ ಕುನ್ನಕೋಲ್ ವಿಭಾಗದಲ್ಲಿ **"ಎ"** ಶ್ರೇಣಿ ಕಲಾವಿದರಾಗಿ ಆಯ್ಕೆಗೊಂಡಿದ್ದಾರೆ.

**ಸದಸ್ಯ ಶ್ರೀನಿವಾಸ್ ಅವರಿಗೆ ಸಂಘದ ಅಭಿನಂದನೆ**






## 2022ರ ಕ್ಯಾಲೆಂಡರ್‌ಗೆ ಪ್ರಾಯೋಜಕರು

| | |
|---|---|
| ಶ್ರೀಧರ್ ಬಿ. | ಕೆ. ಗುಂಡಪ್ಪ |
| ಶ್ರೀಧರ್ ಎ.ಸಿ. | ಬಿ.ಎಸ್. ಸೂರ್ಯನಾರಾಯಣ |
| ಉಮೇಶ್ ಎಸ್. | ವಿ. ಅರುಣ್ |
| ರಮೇಶ್ ಆರ್. | ಕೆ.ಎಸ್. ಪ್ರದೀಪ್ |
| ಡಿ.ಎಂ. ಶೇಖರ್ | ಬಿ.ಎನ್.ಜಿ. ಪ್ರಸಾದ್ |
| ಟಿ.ಎನ್. ರಘು | ಕೆ. ಮಂಜುನಾರಾಯಣ |
| ಆರ್. ಎಸ್. ಪ್ರಶಾಂತ್ | ಮಾನಸ ಸತ್ಯನಾರಾಯಣ |
| ಎಂ.ಆರ್. ರವಿಶಂಕರ್ | ಹೆಚ್.ಕೆ. ಶಶಿಧರ್ |

## ಜನನ

* ಸಂಘದ ಸದಸ್ಯೆ **ಶ್ರೀಮತಿ ಸಂಧ್ಯಾ** ಮತ್ತು **ಶ್ರೀ ರಾಜೇಂದ್ರ** ಅರಳಿಕಟ್ಟೆ ಅವರ ಪುತ್ರ **ಶ್ರೀ ರಾಹುಲ್** ಅರಳಿಕಟ್ಟೆ ಮತ್ತು **ಶ್ರೀಮತಿ ವಿದ್ಯಾಶ್ರೀ** ದಂಪತಿಗಳಿಗೆ ದಿನಾಂಕ 22.10.2021ರಂದು ಹೆಣ್ಣುಮಗು ಜನನವಾಗಿದೆ.
* ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ **ಶ್ರೀ ಟಿ.ಪಿ. ಸೂರ್ಯ ನಾರಾಯಣ** ಮತ್ತು ಸದಸ್ಯೆಯಾದ **ಶ್ರೀಮತಿ ನಾಗಪದ್ಮ** ದಂಪತಿಗಳ ಪುತ್ರಿ **ಶ್ರೀಮತಿ ಸುಪ್ರೀತಾ** ಹಾಗೂ **ಶ್ರೀ ಹರೀಶ್** ದಂಪತಿಗಳಿಗೆ ದಿನಾಂಕ 25.11.2021ರಂದು ಗಂಡು ಮಗು ಜನನವಾಗಿದೆ.

**ಸಂಘದ ಆಶೀರ್ವಾದ**



**ಟಿಟಿಡಿ ದೇವಸ್ಥಾನದಲ್ಲಿ ಕು॥ ವಾಣಿಶ್ರೀ ಸಂಗೀತ**

# ಸತ್ಸಂಗ ಎಂದರೇನು?

**ನ**ಮ್ಮ ಮನೆಗಳಲ್ಲಿ ಟಿವಿಯ ಪ್ರವೇಶ ಆದ ನಂತರ ಅದರ ಪ್ರಭಾವ ಜನರ ಮೇಲೆ ಬಹಳವೇ ಆಗಿದೆ. ಮೊದಲು, ವಾರ್ತೆಗಳು, ಧಾರಾವಾಹಿಗಳು, ಸಿನೆಮಾ, ಚಿತ್ರಗೀತೆಗಳು ಮತ್ತು ಚಲನಚಿತ್ರ ಪ್ರಸಾರ ಇರುತ್ತಿತ್ತು ಮತ್ತು ಎಲ್ಲರೂ ಅದನ್ನೇ ನೋಡಬೇಕಿತ್ತು. ಖಾಸಗಿಯವರಿಗೆ ಭಾಗವಹಿಸಲು ಅವಕಾಶ ಕೊಟ್ಟ ನಂತರ ದಿನದ 24 ಗಂಟೆಯೂ ಒಂದಿಲ್ಲೊಂದು ಪ್ರಸಾರ ಆಗುತ್ತಲೇ ಇರುತ್ತದೆ ಅಭಿರುಚಿಯ ಮೇಲೆ ವೀಕ್ಷಿಸಬಹುದಾಗಿದೆ.

ಚಿಕ್ಕಂದಿನಲ್ಲಿ ನಾವು ನಮ್ಮ ಮನೆಯ, ಹಿರಿಯರು ಹರಿಕಥೆ, ಪುರಾಣ ಮುಂತಾದುವುಗಳನ್ನು ಕೇಳಲು ಪ್ರತಿ ದಿನ ದೇವಸ್ಥಾನಕ್ಕೆ ಹೋಗುವುದನ್ನು ನೋಡಿ ನಾವು, ಜೊತೆಗೆ ಹೋಗುತ್ತಿದ್ದೆವು. ಕ್ರಮೇಣ, ಭಗವದ್ಗೀತೆ, ರಾಮಾಯಣ, ಮಹಾಭಾರತ ಬಗ್ಗೆ ಪಾರಾಯಣ ಮತ್ತು ವಿವರಣೆ ಬಗ್ಗೆ ಕೇಳುತ್ತಿದ್ದೆವು. ಉತ್ತರ ಭಾರತದ ನಗರಗಳಲ್ಲಿ ಸತ್ಸಂಗ ಕಾರ್ಯಕ್ರಮಗಳ ಪ್ರಸಾರದ ಪರಿಚಯ ಆದ ನಂತರ ಸತ್ಸಂಗ ನಮ್ಮಲ್ಲೂ ಪ್ರಾರಂಭವಾಯಿತು.

**ಸತ್ಸಂಗ ಎಂದರೇನು? ಅದರ ಬಗ್ಗೆ ತಿಳಿಯೋಣ :** ಸತ್ಸಂಗ, ಯೋಗ ಮತ್ತು ಆಧ್ಯಾತ್ಮಿಕ ಜೀವನದ ಮೂಲತತ್ವ ಆಗಿದೆ. ಸತ್ಸಂಗ ಪದದ ಅರ್ಥ "ಸತ್ಯ" ಮತ್ತು "ಸಂಗ". ಹಾಗೆಯೇ ಅದರ ಅರ್ಥ "ಸಂಪರ್ಕ". ಆದ್ದರಿಂದ, ಸತ್ಸಂಗ ಎಂದರೆ "ಸತ್ಯದೊಂದಿಗೆ ಒಕ್ಕೂಟ".

ಅತ್ಯುನ್ನತ ಮಟ್ಟದಲ್ಲಿ ಅರ್ಥದಲ್ಲಿ, ಇದರ ಅರ್ಥ ಸತ್ಯದ ನೇರ ಗ್ರಹಿಕೆ ಮತ್ತು ಅದರೊಂದಿಗಿನ ಸಂಪರ್ಕ. ಮತ್ತು ಇನ್ನೂ ಹೆಚ್ಚಿನದು – ಜೀವನದ ಪ್ರತಿಯೊಂದು ಕ್ರಿಯೆ ಮತ್ತು ಸನ್ನಿವೇಶಗಳಲ್ಲಿ ಸತ್ಯದ ಅರಿವಿನೊಂದಿಗೆ ಜೀವನ.

ಸತ್ಸಂಗ ನಮ್ಮ ಅಸ್ತಿತ್ವದಲ್ಲಿ ಜಾಗ್ರತ ಮತ್ತು ಸುಪ್ತಾವಸ್ಥೆಯ ಬದಲಾವಣೆಗಳನ್ನು ತರುತ್ತದೆ, ಸ್ಫೂರ್ತಿ ನೀಡುತ್ತದೆ. ನಮ್ಮ ವರ್ತನೆಗಳಲ್ಲಿ ಬದಲಾವಣೆಯನ್ನೂ ತರುತ್ತದೆ. ನಾವು ಜೀವನದಲ್ಲಿ ಹೊಸ ಅರ್ಥ ಮತ್ತು ಹೊಸ ಸಾಮರ್ಥ್ಯಗಳನ್ನು ನೋಡಲು ಪ್ರಾರಂಭಿಸುತ್ತೇವೆ. ಸತ್ಸಂಗ ಗ್ರಹಿಕೆ ಮತ್ತು ನಮ್ಮ ಸ್ವಂತ ಅಸ್ತಿತ್ವದ ತಿಳುವಳಿಕೆಯನ್ನು ಕ್ರಮೇಣವಾಗಿ ಪರಿವರ್ತಿಸಲು ಸಾಧ್ಯವಾಗುತ್ತದೆ. ನಾವು ಎಂದಿಗೂ ಕನಸು ಕಾಣದ ಹೊಸ ಭರವಸೆಯಂತೆ ಜೀವನವು ಕಾಣಿಸಿ ರೂಪಿಸಿಕೊಳ್ಳಲು ಪ್ರಾರಂಭಿಸುತ್ತೇವೆ.

**ಬದಲಾವಣೆಗಳನ್ನು ಸತ್ಸಂಗ ಹೇಗೆ ತರಬಹುದು? :** ಸತ್ಸಂಗ ದಲ್ಲಿ, ಕೆಲವು ಸಮಸ್ಯೆಯ ಪರಿಹಾರ ಅಥವಾ ಆಧ್ಯಾತ್ಮಿಕ ಜೀವನದ ಕೆಲವು ಅಂಶಗಳು ಎಲ್ಲರ ಗಮನವನ್ನು ಒಂದೇ ದಿಕ್ಕಿನಲ್ಲಿ ನಿರ್ದೇಶಿಸಲಾಗುತ್ತದೆ; ಈ ಕಾರಣದಿಂದಾಗಿಯೇ, ಒಂದು ಗುಂಪು ರೂಪುಗೊಳ್ಳುತ್ತದೆ, ಇದು ಸತ್ಸಂಗದಲ್ಲಿ ಭಾಗವಹಿಸುವ ಎಲ್ಲರ ವೈಯಕ್ತಿಕ ಉದ್ದೇಶಗಳ ಒಟ್ಟು ಮೊತ್ತಕ್ಕಿಂತ ಹೆಚ್ಚು ಬಲವಾಗಿರುತ್ತದೆ.

ಕಂಪನ ತರಂಗಗಳು ನಮ್ಮ ಮನಸ್ಸು ಮತ್ತು ನಮ್ಮ ಶಕ್ತಿ ಕ್ಷೇತ್ರವನ್ನು ಬದಲಾಯಿಸಬಹುದು ಶಕ್ತಿಯನ್ನು ತುಂಬ ಬಹುದು. ಆಧ್ಯಾತ್ಮಿಕ ಆಧಾರಿತ ಜನರ ಗುಂಪು ರಚಿಸಿದ ಸಾಮಾನ್ಯ ಕ್ಷೇತ್ರವು ನಿಮ್ಮ ಮನಸ್ಸನ್ನು ಮಾರ್ಪಡಿಸುತ್ತದೆ.

ಆದಾಗ್ಯೂ, "ಸತ್ಸಂಗ" ಪದಕ್ಕೆ ಮತ್ತೊಂದು ಅರ್ಥವಿದೆ. "ಸತ್ಸಂಗ" ಎಂಬ ಪದವನ್ನು "ದೇವರ ಸನ್ನಿಧಿಯಲ್ಲಿ ಒಟ್ಟಿಗೆ ಇರುವುದು" ಅಥವಾ "ದೇವರನ್ನು ಸ್ಮರಿಸುವ ಜನ ರೊಂದಿಗೆ ಇರುವುದು" ಎಂದೂ ಅನುವಾದಿಸಿದೆ. ಹೀಗಾಗಿ, ಸತ್ಸಂಗವು ಆಧ್ಯಾತ್ಮಿಕವಾಗಿ ಆಧಾರಿತ ಜನರೊಂದಿಗೆ ಬೆರೆತಿದೆ.

ಸತ್ಸಂಗದ ಸಮಯದಲ್ಲಿ ಏನು ಮಾಡಬೇಕು? ನಮ್ಮ ಮನಸ್ಸಿಗೆ ಸಹಜವಾಗಿ ಬರುವ ಯಾವುದನ್ನಾದರೂ ಮಾಡಬಹುದು. ಪ್ರಶ್ನೆಗಳನ್ನು ಕೇಳಲು ಬಯಸಿದರೆ, ಮತ್ತು ಅಂತಹ ಅವಕಾಶವು ಉದ್ಭವಿಸಿದರೆ, ನಂತರ ಕೇಳಿ. ಆದರೆ ಬಾಧ್ಯತೆ ಅನುಭವಿಸಬೇಡಿ. ಅತ್ಯಂತ ಮಹತ್ವದ ಉತ್ತರ ಗಳನ್ನು ಆಳವಾದ, ಹೆಚ್ಚು ಸೂಕ್ಷ್ಮ ಮಟ್ಟದಲ್ಲಿ ರವಾನಿಸ ಲಾಗುತ್ತದೆ. ನೀವು ಕುಳಿತುಕೊಳ್ಳಲು ಬಯಸಿದರೆ, ನಂತರ ಕುಳಿತುಕೊಳ್ಳಿ; ಬೇರೆ ಏನನ್ನೂ ಮಾಡುವ ಅಗತ್ಯವಿಲ್ಲ.

ಸತ್ಸಂಗವು ಯೋಗ ಜೀವನದ ಮೂಲತತ್ವ, ಆಧ್ಯಾತ್ಮಿಕ ಬೆಳವಣಿಗೆಯ ಹಾದಿಯನ್ನು ಆರಿಸಿರುವ ಪ್ರತಿಯೊಬ್ಬ ವ್ಯಕ್ತಿಯು ಆಧ್ಯಾತ್ಮಿಕವಾಗಿ ಜನರೊಂದಿಗೆ ಸಂವಹನ ನಡೆಸುವ ಅವಶ್ಯಕತೆಯಿದೆ, ಕೆಲವರು ವಿಶ್ವಪ್ರಸಿದ್ಧರು. ನಿಮ್ಮ ಸ್ವಂತ ಜೀವನದಲ್ಲಿ ಕ್ರಮ ಮತ್ತು ಅರ್ಥವನ್ನು ತರಲು ನಿಮಗೆ ಸಹಾಯ ಮಾಡುತ್ತದೆ. ಅಸ್ತಿತ್ವದಲ್ಲಿರುವ ಎಲ್ಲದರ ಆಧಾರದ ಮೇಲೆ ಏನಿದೆ ಎಂಬುದನ್ನು ತಿಳಿಯಲು ನಾವು ಆಳವಾದ ಮಟ್ಟದ ಸಂವಹನ ನಡೆಸಲು ಪ್ರಾರಂಭಿಸುತ್ತೇವೆ. ಆಧ್ಯಾತ್ಮಿಕ ಜೀವನ ಅಥವಾ ಆಧ್ಯಾತ್ಮಿಕ ಪುನರ್ಜನ್ಮವು ಸತ್ಸಂಗದಿಂದ ಪ್ರಾರಂಭವಾಗುತ್ತದೆ ಎಂದು ಒಳ್ಳೆಯ ಕಾರಣಕ್ಕಾಗಿ ಹೇಳಲಾಗುತ್ತದೆ.



◆ **ಎನ್.ವಿ. ಸೂರ್ಯ ಪ್ರಕಾಶ್**
9884808132

# ಬೃಹಚ್ಚರಣ ಸದಸ್ಯರು ಹಾಗೂ ಸಹೃದಯದವರಿಂದ ನೂರು ಕುರ್ಚಿಗಳ ಕೊಡುಗೆ...

ಆತ್ಮೀಯ ಬೃಹಚ್ಚರಣ ಬಂಧುಗಳಿಗೆ ನಮಸ್ಕಾರಗಳು.

2010ರಿಂದ ಸಂಘವು ಪುನಶ್ಚೇತನಗೊಂಡು, ಹಲವಾರು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ. ಕಾರ್ಯಕಾರಿ ಸಮಿತಿ ಬಹುತೇಕ ಸಭೆಗಳು ನಮ್ಮ ನಗರದ ಬಸವನಗುಡಿಯ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದಲ್ಲಿ ನಡೆಯುತ್ತಿರುವುದು ಎಲ್ಲರಿಗೂ ತಿಳಿದಿರುವ ವಿಷಯ.

ಸಂಘದಿಂದ ನಡೆಸಿಕೊಂಡು ಬರುತ್ತಿರುವ ಕಾರ್ಯಕ್ರಮಗಳಾದ ವಾರ್ಷಿಕ ಸರ್ವಸದಸ್ಯರ ಸಭೆ, ಹಿರಿಯರಿಗೆ ಗೌರವ–ಸನ್ಮಾನ ಮತ್ತು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸಾಮೂಹಿಕ ಸತ್ಯನಾರಾಯಣ ಪೂಜೆ, ವೈಕುಂಠ ವಾಹನ ಕೊಡುಗೆ ಹಾಗೂ ಇತರ ಚಟುವಟಿಕೆಗಳು ನಮ್ಮ ಸಂಘದ ವತಿಯಿಂದ ನಡೆಸಿಕೊಂಡು ಬರುತ್ತಿದೆ. ಇವುಗಳಿಗೆ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದ ಆವರಣದಲ್ಲಿ ಸ್ಥಳಾವಕಾಶವನ್ನು ನೀಡಿ ಸಭೆ ನಡೆಸುವುದಕ್ಕೆ ಪದಾಧಿಕಾರಿಗಳು ಅವಕಾಶ ಮಾಡಿಕೊಟ್ಟಿರುತ್ತಾರೆ.

ದೇವಾಲಯವು ನೂತನ ಸಭಾಂಗಣವನ್ನು ನಿರ್ಮಿಸಿ ಅದನ್ನು ಭಕ್ತಾದಿಗಳ ಉಪಯೋಗಕ್ಕಾಗಿ ಅನಾವರಣ ಮಾಡಿರುತ್ತಾರೆ. ಅದರ ಸಲುವಾಗಿ ಕುಳಿತುಕೊಳ್ಳಲು ಕುರ್ಚಿಗಳ ಪ್ರಾಯೋಜಕತ್ವವನ್ನು ಸಂಘದ ವತಿಯಿಂದ ಮಾಡಲು ನಮಗೆ ದೇವಾಲಯದ ಮಂಡಳಿ ಮನವಿ ಮಾಡಿತ್ತು. ಈ ಮನವಿಯನ್ನು ಕಾರ್ಯಕಾರಿ ಸಮಿತಿಯಲ್ಲಿ ಚರ್ಚಿಸಿ ಸಂಘದ ಸದಸ್ಯರ ಮೂಲಕ ನೀಡಲು ಸಮಿತಿಯಲ್ಲಿ ತೀರ್ಮಾನಿಸಲಾಯಿತು. ನಮ್ಮ ಮನವಿಗೆ ಸದಸ್ಯರು ಸ್ಪಂದಿಸಿ ನೂರು ಕುರ್ಚಿಗಳನ್ನು ನೀಡಲು ಧನ ಸಹಾಯ ಮಾಡಿದರು. ಕೊಡುಗೆ ನೀಡಿದ ಎಲ್ಲ ಸದಸ್ಯರುಗಳಿಗೆ ಸಂಘವು ಆಭಾರಿಯಾಗಿದೆ.

ಇದೇ ತಿಂಗಳ 10ನೇ ತಾರೀಖು ಶುಕ್ರವಾರ ದೇವಸ್ಥಾನದ ನೂತನ ಸಭಾಂಗಣದಲ್ಲಿ ಉತ್ತಮ ದರ್ಜೆಯ ನೂರು ಕುರ್ಚಿಗಳನ್ನು ಹಸ್ತಾಂತರಿಸುವ ಕಾರ್ಯಕ್ರಮವನ್ನು ನೆರವೇರಿಸಲಾಯಿತು. ಸಂಘದ ಉಪಾಧ್ಯಕ್ಷರಾದ ಶ್ರೀಯುತ ಹೆಚ್.ಕೆ. ಶಶಿಧರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀಯುತರಾದ ಕಾರ್ಯದರ್ಶಿ ಎಸ್.ಸಿ. ಶ್ರೀನಿವಾಸ್, ಖಜಾಂಚಿ ಸತ್ಯನಾರಾಯಣ, ಸಹ ಕಾರ್ಯದರ್ಶಿಗಳಾದ ವಿ. ಅರುಣ್ ಮತ್ತು ಹಿರಿಯ ಸದಸ್ಯರುಗಳಾದ ಎಸ್. ಸೋಮಸುಂದರ ಹಾಗೂ ವಿ.ಎಸ್. ಮಣಿ, ಬಿ.ವಿ. ಶೇಷಾದ್ರಿ ಮತ್ತು ಸಿ.ಎಸ್. ಶ್ರೀನಿವಾಸ ಮೂರ್ತಿ ಇವರುಗಳ ಉಪಸ್ಥಿತಿಯಲ್ಲಿ ದೇವಸ್ಥಾನದ ಆಡಳಿತ ಮಂಡಳಿ ಪರವಾಗಿ ಶ್ರೀಯುತರಾದ ಮಲ್ಲಿಕಾರ್ಜುನ, ನಾರಾಯಣ ಶರ್ಮ ಮತ್ತು ಹರಿಯವರಿಗೆ ಕುರ್ಚಿಗಳನ್ನು ಹಸ್ತಾಂತರಿಸಲಾಯಿತು. ಸಂಘದ ಹಿರಿಯ ಸದಸ್ಯರುಗಳಾದ ಬಿ.ವಿ. ಶೇಷಾದ್ರಿ, ಸಿ.ಎಸ್. ಶ್ರೀನಿವಾಸ ಮೂರ್ತಿ ಮತ್ತು ಎಸ್.ಸಿ. ಶ್ರೀನಿವಾಸ್ ದೇವಾಲಯದ ಆಡಳಿತ ಮಂಡಳಿಯ ಸದಸ್ಯರಿಗೆ ಸಂಘದ ವತಿಯಿಂದ ಶಾಲು ಹೊದಿಸಿ ಮತ್ತು ಹಾರವನ್ನು ಹಾಕಿ ಗೌರವಿಸಲಾಯಿತು. ದೇವಸ್ಥಾನದ ಆಡಳಿತ ಮಂಡಳಿಯ ಪರವಾಗಿ ಶ್ರೀಯುತ ಮಲ್ಲಿಕಾರ್ಜುನರವರು ತುಂಬು ಮನಸ್ಸಿನಿಂದ ಸ್ವೀಕರಿಸಿದರು. ಬೃಹಚ್ಚರಣ ಸಂಘ ಮತ್ತು ದೇವಸ್ಥಾನದ ನಂಟಿನ ಬಗ್ಗೆ ಮಲ್ಲಿಕಾರ್ಜನರವರು ಸ್ಮರಿಸಿದರು ಹಾಗೂ ಸಂಘಕ್ಕೆ ಧನ್ಯವಾದವನ್ನು ಅರ್ಪಿಸಿದರು. ಸಭೆ ಉತ್ತಮವಾಗಿ ಮೂಡಿಬಂದು ಸಹಕಾರ ನೀಡಿದವರಿಗೆಲ್ಲಾ ಉಪಾಧ್ಯಕ್ಷರಾದ ಶ್ರಿಯುತ ಹೆಚ್.ಕೆ. ಶಶಿಧರ್ ಅವರು ವಂದನಾರ್ಪಣೆಯನ್ನು ಸಲ್ಲಿಸಿದರು. ದೇವಸ್ಥಾನದವತಿಯಿಂದ ಲಘು ಉಪಹಾರವನ್ನು ಏರ್ಪಡಿಸಲಾಗಿತ್ತು.

ಸಂಘವು ಮುಂದೆಯೂ ಸಹ ಇಂತಹ ಅನೇಕ ಸಾಮಾಜಿಕ ಕಳಕಳಿಯಿರುವ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುವ ಸಲುವಾಗಿ ಎಲ್ಲಾ ಸದಸ್ಯರುಗಳು ಕೈಜೋಡಿಸಬೇಕೆಂದು ಈ ಮೂಲಕ ಕೋರಲಾಯಿತು.



**◆ ಆರ್.ಎ. ಶ್ಯಾಮಸುಂದರ್**
**9845205674**

**ನೆನಪಿನಂಗಳ – 42**



**ನಡವತ್ತಿ ಎನ್.ವಿ. ಸುಂದರ್ ವಿವಾಹ ಆರತಕ್ಷತೆ 10–08–1975**

# ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ಸಭಾಂಗಣಕ್ಕೆ ಕುರ್ಚಿಗಳ ಕೊಡುಗೆ ನೀಡಿದ ಸಂದರ್ಭ

























ಗೌರವ ಸಮರ್ಪಣೆ

### ಸಂಘದ ಮಹಾಪೋಷಕ

# ಆರ್.ಎಸ್. ವೆಂಕಟಗಿರಿಯಪ್ಪ




ಆನೇಕಲ್ ತಾಲ್ಲೂಕಿನ ಕಿತ್ತಿಗಾನಹಳ್ಳಿಯ ಬೃಹಚ್ಚರಣ ಸಮುದಾಯದ ಆರ್.ಶೇಷಗಿರಿರಾವ್ ಮತ್ತು ಭಾಗ್ಯಮ್ಮ ದಂಪತಿಗಳ ಹಿರಿಯ ಪುತ್ರ ಆರ್.ಎಸ್. ವೆಂಕಟಗಿರಿಯಪ್ಪ ತಮ್ಮ ತಂದೆಯವರಂತೆಯೇ ವ್ಯವಸಾಯ ಮೂಲ ವೃತ್ತಿ. ಕೆಲವು ಕಾಲ ಅಂಚೆ ಇಲಾಖೆಯಲ್ಲೂ ಕೆಲಸ ಮಾಡಿದ್ದರು.



ಶ್ರೀ ವೆಂಕಟಗಿರಿಯಪ್ಪನವರು ಕಿತ್ತಿಗಾನಹಳ್ಳಿಯಲ್ಲಿ ನಡೆಯುವ ನಮ್ಮ ಸಮುದಾಯದ ನಾಗಾರಾಧನೆ, ರಥೋತ್ಸವ, ಗ್ರಾಮದ ಉತ್ಸವ ಮುಂತಾದ ದೇವತಾ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಬೃಹಚ್ಚರಣ ಸಂಘದ ಬಗ್ಗೆ ವಿಶೇಷವಾದ ಕಾಳಜಿ ಉಳ್ಳವರಾಗಿದ್ದು ಪ್ರತಿ ಸಂಘದ ಕಾರ್ಯಕ್ರಮದಲ್ಲೂ ಭಾಗವಹಿಸುತ್ತಿದ್ದ ಹಿರಿಯರು.

ತಾರೀಖು 16.06.1922 ರಂದು ಜನಿಸಿದ ವೆಂಕಟಗಿರಿಯಪ್ಪನವರು, ತಮ್ಮ ನೂರನೇ ವರ್ಷಕ್ಕೆ ಕಾಲಿಟ್ಟ ಕೆಲವೇ ತಿಂಗಳುಗಳಲ್ಲಿ ತಾ.10.09.2021 ರಂದು ಇಬ್ಬರು ಪುತ್ರರಾದ ಕರ್ನಲ್ ವಿ.ಜಿ.ರಾಜನ್, ವಿ.ಎಸ್.ಮಣಿ ಹಾಗೂ ಪುತ್ರಿ ವಿ.ಸುನಂದ ಹಾಗೂ ಅಸಂಖ್ಯಾತ ಬಂಧು–ಮಿತ್ರರನ್ನು ಅಗಲಿರುತ್ತಾರೆ.

ಬೃಹಚ್ಚರಣ ಸಂಘದ ವತಿಯಿಂದ ಮೃತರ ಆತ್ಮಕ್ಕೆ ಭಗವಂತ ಸದ್ಗತಿ ನೀಡಲಿ ಎಂಬ ಪ್ರಾರ್ಥನೆ.

**ಆರ್. ರಮೇಶ್**
ಸಂಪಾದಕ

## ಹಿರಿಯ ಚೇತನರ ನೆನಪಿನ ಚಿತ್ರಗಳು....



ಚಿತ್ರಗಳು : ಎನ್. ಶಿವಕುಮಾರ್

To,

Book-Post

*If undelivered please return to :*
*President*
**'Bruhacharana Sangha'**
No. 27/1, Bull Temple Road,
Basavanagudi,
Bengaluru - 560 004.

Published by Sri B. Subramanyam, President, 'BRUHACHARANA SANGHA' No. 27/1, Bull Temple Road, Basavanagudi, Bengaluru - 560 004.
Printed at Keerthi Printers, Omkara, 240-F, 2nd D Cross, 2nd 'B' Main, Girinagar 1st Phase, Bengaluru - 560 085, Ph : 080-26722034